ಸಂಪಾದಕ : ಶಿವಕುಮಾರ್ ಕೆ. ವರ್ಲಕೊಂಡ

PRGI : KNKAN/26/A2919
E-mail: skandagirivani@gmail.com

# ಸ್ಕಂದಗಿರಿ ವಾಣಿ

Editor : SHIVAKUMAR. K.
M.: 81475 82389 / 9743641515

ಕನ್ನಡ ದಿನಪತ್ರಿಕೆ

₹2/-

ಸತ್ಯದ ಧ್ವನಿ

SKANDAGIRI VANI Kannada Daily SATURDAY | October 10, 2026 | Volume 01 | Issue 85 | Pages 4 |

# ವೈದ್ಯಕೀಯ ಲೋಕದಲ್ಲಿ ಐತಿಹಾಸಿಕ ಸಾಧನೆ!

## ಸ್ಪೇನ್‌ನಿಂದ 12 ಸಾವಿರ ಕಿ.ಮೀ. ದೂರದ ಮುದ್ದೇನಹಳ್ಳಿಯಲ್ಲಿ ರೋಬೋಟಿಕ್ ಹೃದಯ ಶಸ್ತ್ರಚಿಕಿತ್ಸೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಸ್ಪೇನ್‌ನ ಬಾರ್ಸಿಲೋನಾದಲ್ಲಿ ಕುಳಿತು ವೈದ್ಯರೊಬ್ಬರು 12 ಸಾವಿರ ಕಿ.ಮೀ.ಗೂ ಹೆಚ್ಚು ದೂರದಲ್ಲಿರುವ ಕರ್ನಾಟಕದ ಮುದ್ದೇನಹಳ್ಳಿಯ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರಿಗೆ ರೋಬೋಟಿಕ್ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಮುದ್ದೇನಹಳ್ಳಿಯ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಈ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದೆ. ಭಾರತೀಯ ರೋಬೋಟಿಕ್ ಹೃದಯ ಶಸ್ತ್ರಚಿಕಿತ್ಸಾ ಕ್ಷೇತ್ರದ ಪ್ರಮುಖ ವೈದ್ಯರಾದ ಡಾ. ಸುಧೀರ್ ಶ್ರೀವಾಸ್ತವ ಅವರು ಬಾರ್ಸಿಲೋನಾದಲ್ಲಿ ನಡೆದ ಯುರೋಪಿಯನ್ ಅಸೋಸಿಯೇಷನ್ ಫಾರ್ ಕಾರ್ಡಿಯೋ-ಥೊರಾಸಿಕ್ ಸರ್ಜರಿ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದಾಗಲೇ ದೂರದಿಂದಲೇ ರೋಬೋಟ್ ನಿಯಂತ್ರಿಸಿ ಶಸ್ತ್ರಚಿಕಿತ್ಸೆ ನಡೆಸಿದರು.

ಕೋಲಾರ ಜಿಲ್ಲೆಯ 26 ವರ್ಷದ ಮಹಿಳೆ ಹೃದಯದ ಮೇಲಿನ ಎರಡು ಕವಾಟಗಳ ನಡುವೆ ಜನ್ಮತಃ ರಂಧ್ರವಿರುವ ಸಮಸ್ಯೆಯಿಂದ ಬಳಲುತ್ತಿದ್ದರು. ಇದನ್ನು ವೈದ್ಯಕೀಯ ಭಾಷೆಯಲ್ಲಿ ಆಟ್ರಿಯಲ್ ಸೆಪ್ಟಲ್ ಡಿಫೆಕ್ಟ್ ಎಂದು ಕರೆಯಲಾಗುತ್ತದೆ. ಈ ಸಮಸ್ಯೆಗೆ ರೋಬೋಟಿಕ್ ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆ ನೀಡಲಾಯಿತು.



ಬಾರ್ಸಿಲೋನಾದಲ್ಲಿ ಅಳವಡಿಸಲಾಗಿದ್ದ ರೋಬೋಟಿಕ್ ಶಸ್ತ್ರಚಿಕಿತ್ಸಾ ಕನ್ಸೋಲ್ ಮೂಲಕ ಡಾ. ಸುಧೀರ್ ಶ್ರೀವಾಸ್ತವ ಅವರು ಮುದ್ದೇನಹಳ್ಳಿಯ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿದ್ದ ಎಸ್‌ಎಸ್‌ಐ ಮಂತ್ರ ರೋಬೋಟಿಕ್ ವ್ಯವಸ್ಥೆಯನ್ನು ನಿಯಂತ್ರಿಸಿದರು.

ಸುಮಾರು ಮೂರರಿಂದ ನಾಲ್ಕು ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಯಿತು. ಮಣಿಪಾಲ್ ಆಸ್ಪತ್ರೆಯ ಜೈಪುರ ಘಟಕದ ಮುಖ್ಯ ಹೃದಯ ಶಸ್ತ್ರಚಿಕಿತ್ಸಕ ಹಾಗೂ ರೋಬೋಟಿಕ್ ಶಸ್ತ್ರಚಿಕಿತ್ಸಕ ಡಾ.ಲಲಿತ್ ಮಲಿಕ್ ಮತ್ತು ಮುದ್ದೇನಹಳ್ಳಿಯ ಸಂಸ್ಥೆಯ ಮುಖ್ಯ ಹೃದಯ ಶಸ್ತ್ರ ಚಿಕಿತ್ಸಕ ಡಾ.ಸಿ.ಎಸ್.ಹಿರೇಮಠ ಅವರು ಆಸ್ಪತ್ರೆಯಲ್ಲಿ ಉಪಸ್ಥಿತರಿದ್ದು, ಶಸ್ತ್ರ ಚಿಕಿತ್ಸೆಗೆ ಅಗತ್ಯವಾದ ನೆರವು ನೀಡಿದರು.

ರೋಗಿಯ ಆರೋಗ್ಯದ ಮೇಲೂ ನಿರಂತರ ನಿಗಾ ವಹಿಸಿದರು. ಶಸ್ತ್ರ ಚಿಕಿತ್ಸೆಯ ಬಳಿಕ ಮಹಿಳೆಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಸುಮಾರು ಆರು ಗಂಟೆಗಳ ನಂತರ ಉಸಿರಾಟಕ್ಕೆ ಅಳವಡಿಸಿದ್ದ ಟ್ಯೂಬ್ ಅನ್ನು ತೆಗೆದುಹಾಕಲಾಯಿತು ಎಂದು ಆಸ್ಪತ್ರೆ ತಿಳಿಸಿದೆ. ಈ ಶಸ್ತ್ರಚಿಕಿತ್ಸೆಯಲ್ಲಿ ಮೂರು ಸಣ್ಣ ಛೇದನಗಳನ್ನು ಮಾಡಲಾಗಿದ್ದು, ಪ್ರತಿಯೊಂದೂ ಐದು ಮಿಲಿಮೀಟರ್‌ಗಿಂತ ಕಡಿಮೆ ಗಾತ್ರದ್ದಾಗಿತ್ತು. ರಕ್ತಸ್ರಾವ ಮತ್ತು ಶಸ್ತ್ರಚಿಕಿತ್ಸೆಯ ನಂತರದ ನೋವು ಕಡಿಮೆಯಾಗಿತ್ತು ಎಂದು ಸಂಸ್ಥೆ ಹೇಳಿದೆ.

ದೂರದ ಅಂತರವನ್ನೂ ಮೀರಿದ ವೈದ್ಯಕೀಯ ತಂತ್ರಜ್ಞಾನ ಈ ಹಿಂದೆ ಮುದ್ದೇನಹಳ್ಳಿಯ ಇದೇ ಆಸ್ಪತ್ರೆಯಲ್ಲಿ ಗುರುಗ್ರಾಮ್‌ನಿಂದ ರೋಬೋಟಿಕ್ ವ್ಯವಸ್ಥೆಯನ್ನು ನಿಯಂತ್ರಿಸಿ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಇದೀಗ ಸ್ಪೇನ್‌ನ ಬಾರ್ಸಿಲೋನಾದಿಂದ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಈ ತಂತ್ರಜ್ಞಾನವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಳಸುವ ಸಾಧ್ಯತೆಯನ್ನು ತೋರಿಸಲಾಗಿದೆ.

ದೂರದಿಂದಲೇ ರೋಬೋಟ್ ನಿಯಂತ್ರಿಸಿ ನಡೆಸುವ ಶಸ್ತ್ರಚಿಕಿತ್ಸೆಯು ಭವಿಷ್ಯದಲ್ಲಿ ಗ್ರಾಮೀಣ ಹಾಗೂ ವೈದ್ಯಕೀಯ ಸೌಲಭ್ಯಗಳ ಕೊರತೆಯಿರುವ ಪ್ರದೇಶಗಳಿಗೂ ಪರಿಣತ ವೈದ್ಯರ ಸೇವೆ ತಲುಪಿಸಲು ನೆರವಾಗಬಹುದು. ವೈದ್ಯಕೀಯ ಶಿಕ್ಷಣ, ಶಸ್ತ್ರಚಿಕಿತ್ಸಾ ತರಬೇತಿ ಮತ್ತು ವಿವಿಧ ದೇಶಗಳ ತಜ್ಞ ವೈದ್ಯರ ಸಹಯೋಗಕ್ಕೂ ಇದು ಅವಕಾಶ ಕಲ್ಪಿಸಲಿದೆ. ಆದರೆ ಇಂತಹ ಶಸ್ತ್ರಚಿಕಿತ್ಸೆಗಳಿಗೆ ವಿಶ್ವಾಸಾರ್ಹ ಸಂವಹನ ವ್ಯವಸ್ಥೆ, ಸ್ಥಳೀಯ ವೈದ್ಯಕೀಯ ತಂಡದ ಸಮನ್ವಯ ಹಾಗೂ ಸೂಕ್ತ ಸುರಕ್ಷತಾ ಕ್ರಮಗಳು ಅತ್ಯಗತ್ಯ. ಬಡ ಕುಟುಂಬದ ಮಹಿಳೆಗೆ ಉಚಿತ ಚಿಕಿತ್ಸೆ ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆ ಇಬ್ಬರು ಮಕ್ಕಳ ತಾಯಿ. ಅವರ ಪತಿ ಆಟೋರಿಕ್ಷಾ ಚಾಲಕರಾಗಿದ್ದು, ಕುಟುಂಬ ಆರ್ಥಿಕವಾಗಿ ಹಿಂದುಳಿದಿದೆ.

ಇಂತಹ ದುಬಾರಿ ಚಿಕಿತ್ಸೆಯನ್ನು ಪಡೆಯುವುದು ಈ ಕುಟುಂಬಕ್ಕೆ ಕಷ್ಟಸಾಧ್ಯವಾಗಿತ್ತು. ಆದರೆ ಶ್ರೀ ಮಧುಸೂದನ ಸಾಯಿ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಶಸ್ತ್ರಚಿಕಿತ್ಸೆ ಸೇರಿದಂತೆ ಆಸ್ಪತ್ರೆಯ ಸಂಪೂರ್ಣ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಿದೆ.

## ವಿಶ್ವ ಮಾನಸಿಕ ಆರೋಗ್ಯ ದಿನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಶರೀರದ ಕಾಯಿಲೆಗಳಲ್ಲಿ ನಾನಾ ಬಗೆ ಇರುವಂತೆ ಮಾನಸಿಕ ಕಾಯಿಲೆಗಳಲ್ಲೂ ನಾನಾ ಬಗೆಗಳಿವೆ. ಚಿತ್ತ ಚಂಚಲತೆ. ಇದು ಅಲ್ಪ ಮಟ್ಟದ ಕಾಯಿಲೆ, ಉದಾಹರಣೆಗೆ ಪರೀಕ್ಷೆ ಸಮಯದಲ್ಲಿ, ಅಧಿಕಾರಿಗಳನ್ನು ಕಾಣುವ ಸಮಯದಲ್ಲಿ ನಮ್ಮನ್ನು ಕಾಡುವ ಆತಂಕ, ಕಷ್ಟ ನಷ್ಟಗಳು ಬಂದಾಗ ಕಾಡುವ ಖಿನ್ನತೆ, ಸಹಿಸಲಾಗದ ಸಮಸ್ಯೆ ಎದುರಾದಾಗ ಕೆಲವರಿಗೆ ಬರುವ ಕಾಯಿಲೆ, ಇತ್ಯಾದಿ. ಚಿತ್ತ ವಿಕಲತೆ. ಹೆಚ್ಚು ಎಂಬ ಬಿರುದನ್ನು ತರುವ ತೀವ್ರವಾದ ಮನೋರೋಗಗಳನ್ನು ಚಿತ್ತ ವಿಕಲತೆ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ಸ್ಕಿಜೋಫ್ರೀನಿಯಾ: ಖಿನ್ನತೆ ವಿಕಲತೆ ಮೇನಿಕ್ ಡಿಪ್ರೆಸಿವ್, 6 ಬೈಪೋಲಾರ್ ಅಫೆಕ್ಟಿವ್ ಡಿಸಾರ್ಡರ್ ಮದ್ದು/ಮದ್ಯ ವ್ಯಸನ: ನಾನಾ ಕಾರಣಗಳಿಂದ ಹಲವರು ಹೆಂಡ, ಸಾರಾಯಿ, ಗಾಂಜಾ ಅಫೀಮು, ನಿದ್ರಾ ಗುಳಿಗೆಗಳಿಗೆ ದಾಸರಾಗುತ್ತಾರೆ. ಬುದ್ಧಿ ಮಾಂದ್ಯತೆ: ಕೆಲವು ಮಕ್ಕಳಿಗೆ ಬುದ್ಧಿ ಕಡಿಮೆ ಇರುತ್ತದೆ. ಸ್ವಾವಲಂಬಿಗಳಾಗಿ ಬದುಕಲು ಆಗುವುದಿಲ್ಲ. ಇದು ಕಾಯಿಲೆಯಲ್ಲ. ನಾನಾ ಕಾರಣಗಳಿಂದ ಮಿದುಳು ಸರಿಯಾಗಿ ಬೆಳೆಯದಿರುವುದೇ ಈ ಸ್ಥಿತಿಗೆ ಕಾರಣ, ತರಬೇತಿ ಕೊಟ್ಟು ಕಲಿಸದೆ ಹೋದರೆ ಪೂರ್ಣ ಪರಾವಲಂಬಿಗಳಾಗುತ್ತಾರೆ.

ಮಕ್ಕಳಲ್ಲಿ ಕಂಡು ಬರುವ ನಡವಳಿಕೆ ದೋಷಗಳು ಮತ್ತಿತರ ಮನಸ್ಸಿನ ಕಾಯಿಲೆಗಳು: ವಿಪರೀತ ತುಂಟತನ, ವಿಪರೀತ ಮಂಕುತನ, ಹಾಸಿಗೆ ಅಥವಾ ಬಟ್ಟೆಯಲ್ಲೇ ಮೂತ್ರ ಮಾಡಿಕೊಳ್ಳುವುದು. ಶಾಲೆಗೆ ಹೋಗಲು ನಿರಾಕರಿಸುವುದು, ಶಾಲೆಗೆ ಚಕ್ಕರ್ ಹೊಡೆಯುವುದು, ವಿಪರೀತ ಭಯಪಡುವುದು. ಉನ್ಮಾದದ ನಡವಳಿಕೆ, ಸುಳ್ಳು, ಕಳ್ಳತನ, ಲೈಂಗಿಕ ಅಪರಾಧ ಮುಂತಾದ ಸಮಾಜ ಕಂಟಕ ನಡವಳಿಕೆಗಳು ಮಕ್ಕಳ ಕಾಯಿಲೆಗಳ ಚಿಹ್ನೆಗಳು. ಮನೋ ದೈಹಿಕ ಬೇನೆಗಳು: ದೀರ್ಘಕಾಲದ ಮಾನಸಿಕ ಕ್ಲೇಶಗಳಿಗೆ ತುತ್ತಾಗಿ ಅದರ ಪರಿಣಾಮಕಾರಿ ಕಾಣಿಸಿಕೊಳ್ಳುವ ಜಠರದ ಹುಣ್ಣು, ಅಧಿಕ ರಕ್ತದೊತ್ತಡ, ಅಸ್ತಮಾ, ಕೆಲವು ಬಗೆಯ ಅಲರ್ಜಿ ಕೆಲವು ಚರ್ಮ ರೋಗಗಳು, ತಲೆ ನೋವು, ಮುಂತಾದ ಕಾಯಿಲೆಗಳನ್ನು ಮನೋದೈಹಿಕ ಬೇನೆಗಳು ಎಂದು ಕರೆಯಲಾಗುತ್ತದೆ.

ವ್ಯಕ್ತಿ ದೋಷಗಳು: ಸಮಾಜದ ರೀತಿ ನೀತಿಗಳನ್ನು ಅಳವಡಿಸಿಕೊಂಡು, ಹೊಂದಿಸಿಕೊಂಡು ಹೋಗಲಾಗದೆ ಅಥವಾ ತಮ್ಮ ಅಸಹಜ ಅಸಾಮಾನ್ಯ ಮಾತು ವರ್ತನೆ, ದೋರಣೆಗಳಿಂದ ತಾವೂ ಕಷ್ಟ ಪಡುವವರು ಅಥವಾ ಇತರರನ್ನು ಕಷ್ಟಪಡಿಸುವವರು ವ್ಯಕ್ತಿ ದೋಷಗಳಿಂದ ನರಳುತ್ತಾರೆ ಎನ್ನಬಹುದು. ಮಾನಸಿಕ ಖಾಯಿಲೆಗಳನ್ನು ತಡೆಗಟ್ಟುವುದು ಹೇಗೆ. ಮೆದುಳಿನ ಆರೋಗ್ಯ: ತಲೆಗೆ ಪೆಟ್ಟು ಬೀಳುವುದನ್ನು ತಪ್ಪಿಸಬೇಕು ಉದಾ: ಸ್ಕೂಟರ್ ಓಡಿಸುವಾಗ ಹೆಲ್ಮೆಟ್ ಹಾಕುವುದು ಅಗತ್ಯ. ದೈಹಿಕ ಆರೋಗ್ಯ: ಯಾವುದೇ ಶಾರೀರಿಕ ರೋಗ ಲಕ್ಷಣ ಕಾಣಿಸಿಕೊಂಡಾಗ ಉದಾಸೀನ ಮಾಡದೇ ನಿಮ್ಮ ಪರಿಚಯದ ವೈದ್ಯರನ್ನು ಕಾಣಿರಿ. ವೈದ್ಯರ ಮಾರ್ಗದರ್ಶನದಲ್ಲಿ ನಿಮ್ಮ ಅನಾರೋಗ್ಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಿ. ಸಂಬಂಧಗಳು: ಎಲ್ಲರೊಡನೆ ಸ್ನೇಹ ಬೆಳೆಸಿ, ಸ್ನೇಹ ಪೂರ್ಣ ನಡವಳಿಕೆ ಆತಂಕವನ್ನು ಕಡಿಮೆ ಮಾಡುತ್ತದೆ. ನಿಮ್ಮ ಅಭಿರುಚಿಗೆ ತಕ್ಕ ಹಾಗೂ ನಿಮ್ಮೊಡನೆ ಸ್ಪಂಧಿಸಬಲ್ಲ ಕೆಲವು ಆತ್ಮೀಯರೊಡನೆ ನಿಮ್ಮ ಅನಿಸಿಕೆ, ಆಲೋಚನೆ, ಭಾವನೆಗಳನ್ನು ಹಂಚಿಕೊಳ್ಳಿ. ನಿಮ್ಮ ಬಗ್ಗೆ ಭರವಸೆ ಬೆಳೆಸಿಕೊಳ್ಳಿ. ಪ್ರಕೃತಿ ಇತ್ತ ನಿಮ್ಮ ದೇಹ, ಸಾಮರ್ಥ್ಯಗಳನ್ನು ಅವು ಇದ್ದ ಹಾಗೆ ಸ್ವೀಕರಿಸಿ. ನನ್ನಂತೆ ನಾನಿರುತ್ತೇನೆ.

ಮನೋಚೈತನ್ಯ ಚಿಕಿತ್ಸೆ ಕಾರ್ಯಕ್ರಮದ ವೇಳಾಪಟ್ಟಿ ವಿವರ ಎರಡನೇ ಸೋಮವಾರ ಮತ್ತು ನಾಲ್ಕನೇ ಮಂಗಳವಾರ ಬಾಗೇಪಲ್ಲಿ, ಮೂರನೇ ಮಂಗಳವಾರ ಗುಡಿಬಂಡೆ. ಮೊದಲನೇ ಶುಕ್ರವಾರ ಗೂಳೂರು, ಎರಡನೇ ಮಂಗಳವಾರ ಚಿಂತಾಮಣಿ. ಮೂರನೇ ಶುಕ್ರವಾರ ಶಿಡ್ಲಘಟ್ಟ, ಪ್ರತಿ ಬುಧವಾರ ಮುರುಗಮಲ್ಲ, ಮೊದಲನೇ ಮಂಗಳವಾರ ಜಂಗಮಕೋಟೆ. ಸೋಮವಾರ, ಮಂಗಳವಾರ ಮತ್ತು ಶುಕ್ರವಾರ ಗೌರಿಬಿದನೂರು. ಈ ದಿನಗಳಲ್ಲಿ ಮಾನಸಿಕ ರೋಗ ತಜ್ಞರು ಹಾಗೂ ತಂಡ ಮೇಲೆ ತಿಳಿಸಿರುವ ದಿನಗಳಂದು ಲಭ್ಯವಿರುತ್ತಾರೆ.

ಈ ಚಿಕಿತ್ಸೆಯ ಸದುಪಯೋಗ ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಆಸ್ಪತ್ರೆಗಳನ್ನು ಭೇಟಿ ಮಾಡಿ, ಉಚಿತ ಆರೋಗ್ಯ ಸಹಾಯವಾಣಿ 104ಕ್ಕೆ ಕರೆಮಾಡಿ ಸಂಪರ್ಕಿಸಬಹುದೆಂದು ಡಿಎಚ್‌ಒ ಡಾ.ಚೇತನ್ ತಿಳಿಸಿದ್ದಾರೆ.

# ಅನ್ಯಾಯದ ವಿರುದ್ಧ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ

## ಅಧಿಕಾರದ ವ್ಯಾಮೋಹಕ್ಕಿಂತ ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡಿ-ಸಂತೋಷ್‌ಹೆಗ್ಡೆ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಶಿಡ್ಲಘಟ್ಟ:** ಸಾರ್ವಜನಿಕ ಹಿತಾಸಕ್ತಿ ಮತ್ತು ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ರೂಡಿಸಿಕೊಳ್ಳಬೇಕು. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ ಹಾಗೂ ಸಾಮಾಜಿಕ ತಪ್ಪುಗಳನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್‌ಹೆಗ್ಡೆ ಹೇಳಿದರು.

ನಗರದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನೀಲಾ ಯುವ ಬ್ರಿಗೇಡ್ ಹಾಗೂ ಆರೋಗ್ಯ ಇಲಾಖೆಯ ವತಿಯಿಂದ ನಾರಾಯಣ ಹೃದಯಾಲಯ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉಚಿತ ಹೃದಯ ಆರೋಗ್ಯ ತಪಾಸಣೆ ಹಾಗೂ ಬೃಹತ್ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಅಧಿಕಾರ ಮತ್ತು ಶ್ರೀಮಂತಿಕೆಗೆ ಹೆಚ್ಚಿನ ಬೆಲೆ ನೀಡುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಹೇಗಾದರೂ ಮಾಡಿ ಶ್ರೀಮಂತರಾಗಬೇಕು ಎಂಬ ಮನೋಭಾವ ಹೆಚ್ಚಾಗುತ್ತಿದೆ. ಆದರೆ ನಾವು ಶ್ರೀಮಂತರಾಗುವ




ಸಂದರ್ಭದಲ್ಲಿ ಯಾರ ಹೊಟ್ಟೆಗೆ ಕಲ್ಲು ಬೀಳುತ್ತಿದೆ ಎಂಬುದನ್ನು ಯೋಚಿಸಬೇಕಾಗಿದೆ. ಅಧಿಕಾರದ ವ್ಯಾಮೋಹದಿಂದ ಮಾನವೀಯ ಮೌಲ್ಯಗಳನ್ನು ಮರೆಯಬಾರದು ಎಂದು ತಿಳಿಸಿದರು.

ಭಾರತವು ಅಂತರರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕವಾಗಿ ನಾಲ್ಕನೇ ಸ್ಥಾನಕ್ಕೇರಿದೆ ಎಂದು ಹೆಮ್ಮೆಪಡುತ್ತಿದ್ದರೂ, ಅದರ ನೇರ ಪರಿಣಾಮ ಸಾಮಾನ್ಯ ಜನರ ಬದುಕಿನ ಮೇಲೆ ಎಷ್ಟರ ಮಟ್ಟಿಗೆ ಬೀರುತ್ತಿದೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ದೇಶದ ಆರ್ಥಿಕ ಪ್ರಗತಿಯ ಜೊತೆಗೆ ಅದರ ಫಲ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು ಎಂದರು.

ಇಂದಿನ ಸಮಾಜದಲ್ಲಿ ಮೌಲ್ಯವರ್ಧಿತ ಶಿಕ್ಷಣದ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಮಕ್ಕಳಿಗೆ ಮಾನವೀಯತೆ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಕಲಿಸುವವರು ಯಾರು ಎಂಬ ಪ್ರಶ್ನೆ ನಮ್ಮ ಮುಂದಿದೆ. ಶಾಲೆಗಳಲ್ಲಿ ನೈತಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮನೆಯೇ ಮೊದಲ ಶಾಲೆ, ಆದರೆ ಅಲ್ಲಿ ಮಕ್ಕಳಿಗೆ ಮೌಲ್ಯಗಳನ್ನು ಕಲಿಸುವ ಜವಾಬ್ದಾರಿ ಪೋಷಕರ ಮೇಲಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವದ ಆಶಯಗಳು ಬಲವಾಗಬೇಕಾದರೆ ಜನರ ಮನೋಭಾವದಲ್ಲಿಯೂ ಬದಲಾವಣೆ ಅಗತ್ಯ. ಇಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿದ್ದರೂ ರಾಜಪ್ರಭುತ್ವದ ಮನೋಭಾವ ಬೆಳೆದುಬರುತ್ತಿರುವುದು ಸರಿಯಲ್ಲ. ಅಧಿಕಾರವು ಜನರ ಸೇವೆಗಾಗಿ ಎಂಬ ಅರಿವು ಅಧಿಕಾರದಲ್ಲಿರುವವರಿಗೂ, ಸಾರ್ವಜನಿಕರಿಗೂ ಇರಬೇಕು ಎಂದರು.

# ಪ್ರದೀಪ್ ಈಶ್ವರ್ ವಿರುದ್ಧ ಕುರುಬ ಸಮುದಾಯ ಆಕ್ರೋಶ!

## ನಯಾಪೈಸೆ ಕೆಲಸ ಮಾಡದ ಶಾಸಕರೆಂದು ಲೇವಡಿ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು ಅಭಿವೃದ್ಧಿ ಮಾಡುವುದನ್ನು ಬಿಟ್ಟು ಗೊಂದಲ ಸೃಷ್ಟಿಸುವುದರಲ್ಲೇ ಕಾಲ ಕಳೆಯುತ್ತಿದ್ದಾರೆ ಎಂದು ಕುರುಬ ಸಮುದಾಯದ ಮುಖಂಡ ಕಾರಕೂರಪ್ಪ ಆರೋಪಿಸಿದ್ದಾರೆ. ಇವರು ಶಾಸಕರಾದ ದಿನದಿಂದಲೂ ಅನಗತ್ಯ ವಿವಾದಗಳ ಮೂಲಕವೇ ಕಾಲ ಕಳೆಯುತ್ತಿದ್ದು, ಇವರು ಮತ್ತೊಮ್ಮೆ ಅಭ್ಯರ್ಥಿಯಾದರೆ ಯಾರೂ ಇವರಿಗೆ ಮತ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಕುರುಬ ಸಮುದಾಯದ ಮುಖಂಡ ಕಾರಕೂರಪ್ಪ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀವು ಮತ್ತೊಮ್ಮೆ ಶಾಸಕರಾಗುವುದಿರಲಿ, ಪೆರೇಸಂದ್ರದಲ್ಲಿ ಗ್ರಾಮ ಪಂಚಾಯಿತಿ ಸದಸ್ಯನಾಗಲೂ ಸಾಧ್ಯವಿಲ್ಲ, ರಕ್ಷಾ ರಾಮಯ್ಯ ಮತ್ತು ಡಾ.ಎಂ.ಸಿ. ಸುಧಾಕರ್ ಅವರ ಬಗ್ಗೆ ಮಾತನಾಡಿದ ನಿಮಗೆ ಸಮಯ ಸಮೀಪಿಸಿದೆ. ಹಾಗಾಗಿಯೇ ಈ ರೀತಿ ಆಡುತ್ತಿದ್ದೀಯಾ, ನಿಮ್ಮ ರಾಜಕೀಯ ಅವಸಾನ ಒಂದೇ ಅವಧಿಗೆ ಮುಕ್ತಾಯವಾಗಿದೆ. ಅವರಿಗೆ ಯಾವ ರೀತಿಯಲ್ಲೂ ಸಮನಾಗಲು ಅರ್ಹನಲ್ಲದ ನೀನು ಅವರಿಗೇ ಸವಾಲು ಹಾಕುವುದನ್ನು ಬಿಡು ಎಂದು ಎಚ್ಚರಿಕೆ ನೀಡಿದ್ದಾರೆ.

ಚಿಕ್ಕಬಳ್ಳಾಪುರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುರುಬ ಸಮುದಾಯದ ಮುಖಂಡ ಕಾರಕೂರಪ್ಪ, ಇದ್ದ ಅವಕಾಶವನ್ನು ಹಾಳು ಮಾಡಿ ಕೊಂಡಿದ್ದೀಯ ಅಂಬೇಡ್ಕರ್ ಅವರಿಗೆ ಅಗೌರವ ತೋರಬೇಡ,



ಈ ಥರಾ ಮಾತನಾಡೋದನ್ನ ಬಿಡು. ವಿಷ್ಣುಪ್ರಿಯ ಕಾಲೇಜು ಮಾಲೀಕ ರಾಮಚಂದ್ರರೆಡ್ಡಿ ಮಗನನ್ನು ಹೇಗೆ ಪ್ರಾಧಿಕಾರಕ್ಕೆ ಆಯ್ಕೆ ಮಾಡಿದೆ. ಅವರಪ್ಪ ರಾಮಚಂದ್ರರೆಡ್ಡಿ ಬಿಜೆಪಿ ಮುಖಂಡ, ಅಂತಹವನನ್ನು ಹೇಗೆ ಪ್ರಾಧಿಕಾರಕ್ಕೆ ಆಯ್ಕೆ ಮಾಡಿದೆ, ಅವರು ಮತ ಹಾಕಿದ್ದಾರಾ ನಿನಗೆ, ರಕ್ಷಿತ್ ರೆಡ್ಡಿ ಎಂಬ ಹುಡುಗ ಕಾಂಗ್ರೆಸ್‌ಗೆ ಮಾಡಿದ ಕೆಲಸ ಏನು ಅಂತ ಹೇಳು ಶಾಸಕರೇ ಎಂದು ಪ್ರಶ್ನಿಸಿದರು.

ಪೆರೇಸಂದ್ರದ ನಾಗಭುಷಣ ಎಂಬುವರ ಕೊಡುಗೆ ಕಾಂಗ್ರೆಸ್ ಪಕ್ಷಕ್ಕೆ ಏನು, ಅಂತಹವನನ್ನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾಡಿದ್ದೀಯಾ, ನಿನಗೆ ಮಾನ ಮರ್ಯಾದೆ ಇದೆಯಾ, ಉಳಿದ ಒಂದೂವರೆ ವರ್ಷದಲ್ಲಾದರೂ ಜನಪರ ಕೆಲಸ ಮಾಡು, ನಿನಗೆ ಒಳ್ಳೆಯ ಹೆಸರು ಪಡೆಯಲು ಸಾಧ್ಯವಿಲ್ಲ,

ಅಂಬೇಡ್ಕರ್ ಜಯಂತಿಗೆ ಬಾರದ ನೀನು ದಲಿತರ ಉದ್ಧಾರ ಮಾಡ್ತೀಯಾ, ಶಾಕರಾಗಿದ್ದ ಅನಸೂಯಮ್ಮ ಅವರನ್ನು ಪ್ರಾಧಿಕಾರದ ಸದಸ್ಯೆ ಮಾಡಿದ್ದೀಯಾ, ಅವರನ್ನು ಯಾಕೆ ಅಧ್ಯಕ್ಷೆ ಮಾಡಲಿಲ್ಲ, ಒಬಿಸಿ ಹುಡುಗ ಎಂದು ಬೊಬ್ಬೆ ಹೊಡೆಯುವ ನೀನು, ನಿಮ್ಮದೇ ಸಮುದಾಯದ ವ್ಯಕ್ತಿಯನ್ನು ಚಿಮುಲ್ ನಿರ್ದೇಶಕ ಸ್ಥಾನದಿಂದ ತೆಗೆಸಿದ್ದೀಯಾ, ನಿನನ್ನ ಸಮುದಾಯಕ್ಕೆ ನಿನ್ನ ಕೊಡುಗೆ ಏನು ಅಂತ ಹೇಳು ಪ್ರದೀಪ್ ಈಶ್ವರ್ ಎಂದು ಪ್ರಶ್ನಿಸಿದರು.

ಬಲಿಜ ಜಾಗೃತಿ ಸಮಿತಿಯ ಎನ್. ಮಂಜುನಾಥ್ ಮಾತನಾಡಿ, ಕ್ಷೇತ್ರದಲ್ಲಿ 40 ಸಾವಿರ ಮತ ಬಲಿಜ ಸಮುದಾಯ ಹೊಂದಿದೆ. ಇಂತಹ ಸಮುದಾಯದಿಂದ ಶಾಸಕರಾದ ಪ್ರದೀಪ್ ಈಶ್ವರ್ ಅವರು ಶಾಸಕರಾದ ನಂತರ ಅವರ ಮಾತುಗಳನ್ನು ಎಲ್ಲರೂ ವಿರೋಧಿಸುತ್ತಿದ್ದಾರೆ.

ಅವರ ವರ್ತನೆ ಹೀಗೇ ಮುಂದುವರಿದರೆ ಅವರ ಕಾರ್ಯಕ್ರಮಗಳಲ್ಲಿ ಕಪ್ಪು ಬಟ್ಟೆ ಪ್ರದರ್ಶನ ಮಾಡಿ ಧಿಕ್ಕಾರ ಕೂಗುವ ಕಾಲ ದೂರವಿಲ್ಲ. ರಕ್ಷಾ ರಾಮಯ್ಯ ಅವರ ಬಗ್ಗೆ ಮಾತನಾಡಿ, ಬಲಿಜ ಸಮುದಾಯವನ್ನು ಅವಮಾನಿಸಿದ್ದಾರೆ. ಎಂ.ಎಸ್.ರಾಮಯ್ಯ ಕುಟುಂಬ ಮತ್ತು ಪಿ.ಸಿ. ಮೋಹನ್ ಅವರು ನಮ್ಮ ಸಮುದಾಯಕ್ಕೆ ಎರಡು ಕಣ್ಣು ಇದ್ದಂತೆ. ಈ ಎರಡೂ ಕುಟುಂಬಗಳು ಯಾರನ್ನೂ ಕೀಳಾಗಿ ಕಂಡಿಲ್ಲ. ಇಂತಹ ಎರಡೂ ಕುಟುಂಬಗಳನ್ನೂ ಕೀಳಾಗಿ ಮಾತನಾಡಿದ ಕೀರ್ತಿ ನಮ್ಮ ಶಾಸಕರಿಗೆ ಸಲ್ಲುತ್ತದೆ. ಇಂತಹ ಶಾಸಕರು ಮಾಡಿದ ಕೆಲಸಕ್ಕೆ ನಾನು ಕ್ಷಮೆ ಕೋರುತ್ತೇನೆ ಎಂದರು.

# ಮೈಸೂರು ದಸರಾ ಉದ್ಘಾಟಿಸಲಿರುವ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಸ್ವಾಮಿಗಳು

ಬೆಂಗಳೂರು, : ಐತಿಹಾಸಿಕ, ಜಗತ್ಪ್ರಸಿದ್ಧ ಮೈಸೂರು ದಸರೆಯನ್ನು ಈ ಬಾರಿ ಕೊಪ್ಪಳದ ಸಂಸ್ಥಾನ ಗವಿಮಠದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಅಕ್ಟೋಬರ್ 11 ರಂದು ನಾಡದೇವಿ ಶ್ರೀ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಲಿದ್ದಾರೆ.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳ ಪರಿಚಯ



ಕೊಪ್ಪಳ ಗವಿಮಠದ ಪೀಠಾಧಿಪತಿಯಾಗಿ ಲಕ್ಷಾಂತರ ಭಕ್ತರ ಹೃದಯದಲ್ಲಿ ಸ್ಥಾನ ಪಡೆದಿರುವ ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳು ಕಲಬುರಗಿ ಜಿಲ್ಲೆಯ ಹಾಗರಗುಂಡಗಿ ಗ್ರಾಮದ ಸಾಮಾನ್ಯ ಜಂಗಮ ಕುಟುಂಬವೊಂದರಲ್ಲಿ 1977 ರಲ್ಲಿ ಜನಿಸಿದರು.

ಇವರ ಪೂರ್ವಾಶ್ರಮದ ಹೆಸರು ಪರ್ವತಯ್ಯ ಹಿರೇಮಠ, ಕುಟುಂಬದ ಆರ್ಥಿಕ ಸಂಕಷ್ಟದ ಪರಿಣಾಮ ಪರ್ವತಯ್ಯನವರ ಶಿಕ್ಷಣ ಪದೇಪದೇ ಅಡಚಣೆಗೆ ಒಳಗಾಗುತ್ತಿತ್ತು.

1989-90 ರ ಸಮಯದಲ್ಲಿ ಹಾಗರಗುಂಡಗಿ ಗ್ರಾಮಕ್ಕೆ ಬಂದಿದ್ದ ವಿಜಯಪುರದ ತಮದಡ್ಡಿ ಮಠದ ಶ್ರೀ ಶಿವಶಂಕರ ಸ್ವಾಮೀಜಿಗಳು "ಈತನನ್ನು ಶಾಲೆಯಿಂದ ಯಾಕೆ ಬಿಡಿಸುತ್ತೀರಿ? ನಾನು ಎಲ್ಲಿಯಾದರೂ ಮಠಕ್ಕೆ ಸೇರಿಸಿ ಶಾಲೆ ಓದಿಸುತ್ತೇನೆ" ಎಂದು ಪರ್ವತಯ್ಯನ ತಂದೆ-ತಾಯಿಗೆ ಭರವಸೆ ನೀಡಿ ತಮ್ಮೊಂದಿಗೆ ಕರೆದುಕೊಂಡು ಗದಗ ಜಿಲ್ಲೆಯ ಮುಂಡರಗಿಯ ಶ್ರೀ ಅನ್ನದಾನೇಶ್ವರ ಮಠದ ಬೋರ್ಡಿಂಗ್‌ಗೆ ಸೇರಿಸಲು ಹೊರಡುತ್ತಾರೆ. ಮಾರ್ಗ ಮಧ್ಯೆ ಕೊಪ್ಪಳದಿಂದ ಮುಂಡರಗಿಗೆ ಹೋಗುವ ಕೊನೆಯ ಬಸ್ ತಪ್ಪಿ ಹೋಗುತ್ತದೆ. ಅಂದು ರಾತ್ರಿ ಕೊಪ್ಪಳದ ಗವಿಮಠದಲ್ಲಿ ವಸತಿ ಮಾಡಲು ಅಲ್ಲಿದ್ದ ಸಹಪ್ರಯಾಣಿಕರೊಬ್ಬರ ಸಲಹೆ ನೀಡುತ್ತಾರೆ. ಕೊಪ್ಪಳದ ಗವಿಮಠಕ್ಕೆ ಈ ಬಂದ ಬಾಲಕನನ್ನು ಅಂದಿನ ಗವಿಮಠದ ಪೀಠಾಧಿಪತಿ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು ಗಮನಿಸುತ್ತಾರೆ, ಎಲ್ಲಿಗೆ ಹೊರಟಿದ್ದು ಎಂದು ವಿಚಾರಿಸುತ್ತಾರೆ. ತಮದಡ್ಡಿಯ ಶ್ರೀಗಳು ಮುಂಡರಗಿಗೆ ಹೋಗುವ ಉದ್ದೇಶ ತಿಳಿಸುತ್ತಾರೆ. ಗವಿಮಠದಲ್ಲಿಯೂ ಉತ್ತಮ ಶಿಕ್ಷಣ, ಬೋರ್ಡಿಂಗ್ ಇದೆ ಇಲ್ಲಿಯೇ ಪ್ರವೇಶ ಪಡೆಯಬಹುದು ನೋಡಿ ಬನ್ನಿ ಎಂದು ನೀಡುತ್ತಾರೆ.

ಗವಿಮಠ, ಪ್ರೌಢಶಾಲೆ, ಬೋರ್ಡಿಂಗ್ ನೋಡಿದ ಪರ್ವತಯ್ಯ ಹಾಗೂ ತಮದಡ್ಡಿ ಶ್ರೀಗಳು ಕೊಪ್ಪಳದಲ್ಲಿಯೇ ವ್ಯಾಸಂಗ ಮುಂದುವರೆಸಲು ನಿರ್ಧರಿಸುತ್ತಾರೆ. ವಿದ್ಯಾರ್ಥಿಯಾಗಿ ಮಠಕ್ಕೆ ಬಂದ ಪರ್ವತಯ್ಯನವರು ಅಂದಿನ ಪೀಠಾಧಿಪತಿ ಶ್ರೀ ಶಿವಶಾಂತವೀರ ಸ್ವಾಮಿಗಳ ವಿಶೇಷ ದೃಷ್ಟಿ, ಕಾಳಜಿಯಿಂದ ಹಿರಿಯ ಶ್ರೀಗಳು ತಮ್ಮ ವಾಸಸ್ಥಳದ ಸಮೀಪ, ಗವಿಯ ಬಳಿಯ ಕೋಣೆಯಲ್ಲಿಯೇ ಇರಲು ಹೇಳಿದರು.

ಪರ್ವತಯ್ಯ ಓದುತ್ತಾ, ಮಠದ ಸೇವೆ ಮಾಡುತ್ತಾ, ಗುರುಗಳ ಮಾರ್ಗದರ್ಶನದಲ್ಲಿ ಪರ್ವತದೇವರಾಗಿ ಬೆಳೆಯತೊಡಗಿದರು.

ಶಿವಶಾಂತವೀರ ಮಹಾಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಬಸವಾದಿ ಶರಣರ ವಚನಗಳು ಸೇರಿ, ಹಲವು ಗ್ರಂಥಗಳನ್ನು ನೀಡಿದರು. ಆಹಾರ, ದಿನಚರಿ, ಶಿಸ್ತಿನೊಂದಿಗೆ ಮತ್ತು ಅಧ್ಯಯನ ಮುಂದುವರೆಸಿದರು.ಬಿ.ಎ.ಪದವಿಯನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದ ರ್‍ಯಾಂಕಿನೊಂದಿಗೆ ಉತ್ತೀರ್ಣರಾದರು. ಮುಂದೆ ಪುಣೆ, ತಿರುಪತಿಯಲ್ಲಿ ತತ್ವಶಾಸ್ತ್ರ, ಸಂಸ್ಕೃತ ಹಾಗೂ ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದರು.

ಶ್ರೀ ಶಿವಶಾಂತವೀರ ಮಹಾಸ್ವಾಮೀಜಿಗಳ ಇಚ್ಛೆಯಂತೆ 2002ರ ಡಿಸೆಂಬರ್ 13ರಂದು 25 ವರ್ಷದ ಪರ್ವತದೇವರಿಗೆ "ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿ"ಯಾಗಿ ನಿರಂಜನ ಪಟ್ಟಾಧಿಕಾರ ನೀಡಲಾಯಿತು.

ಗವಿಮಠದ ಜಾತ್ರೆಗೆ ಹೊಸ ಸ್ವರೂಪ :

ಜಾತ್ರೆ ಎಂದರೆ ದೇವರ ದರ್ಶನ, ಉತ್ಸವ ಮತ್ತು ಪ್ರಸಾದಕ್ಕೆ ಸೀಮಿತವಾಗಬಾರದು. ಅದು ಸಮಾಜದ ಸಮಸ್ಯೆಗಳ ಕುರಿತು ಚಿಂತಿಸುವ, ಜನರನ್ನು ಜಾಗೃತಗೊಳಿಸುವ ಮತ್ತು ಹೊಸ ಆಲೋಚನೆಗಳಿಗೆ ವೇದಿಕೆಯಾಗಬೇಕು ಎಂಬ ದೃಷ್ಟಿಯಿಂದ ಜಾತ್ರೆಯನ್ನು ಸಾಂಸ್ಕೃತಿಕ, ಕ್ರೀಡೆ ಹಾಗೂ ಮಹಾದಾಸೋಹಗಳ ಜಾಗೃತಿ ಉತ್ಸವವಾಗಿ ರೂಪಿಸಿದರು.

ಮಹಾದಾಸೋಹದ ವಿಸ್ತರಣೆ:

ಗವಿಮಠದ ಪರಂಪರೆಯಲ್ಲಿ ದಾಸೋಹಕ್ಕೆ ವಿಶೇಷ ಸ್ಥಾನವಿದೆ. ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳು ಅದಕ್ಕೆ ಮತ್ತಷ್ಟು ವಿಸ್ತಾರ ನೀಡಿದರು.

ಜಾತ್ರೆಯ ಸಂದರ್ಭದಲ್ಲಿ ಲಕ್ಷಾಂತರ ಜನರಿಗೆ ಪ್ರಸಾದ ಒದಗಿಸುವ ವ್ಯವಸ್ಥೆ ರೂಪುಗೊಂಡಿತು. ಭಕ್ತರು ತಮ್ಮ ಮನೆಗಳಿಂದ ರೊಟ್ಟಿಗಳನ್ನು,ದವಸ,ದ ,ನ್ಯಗಳನ್ನು, ತರಕಾರಿಗಳನ್ನು ತಂದುಕೊಟ್ಟು ಪ್ರತಿದಿನ ಸ್ವಯಂ ಪ್ರೇರಿತರಾಗಿ ದುಡಿದು ಲಕ್ಷಾಂತರ ಭಕ್ತರಿಗೆ ಮಹಾದಾಸೋಹ ನಿರ್ವಹಿಸುತ್ತಾರೆ.

ಪರಿಸರ ಜಾಗೃತಿ :

ಬಿಸಿಲ ನಾಡು ಕೊಪ್ಪಳ ಭಾಗದಲ್ಲಿ ಹಸಿರು ವಾತಾವರಣ ನಿರ್ಮಿಸುವ ಸಂಕಲ್ಪದೊಂದಿಗೆ ಪ್ರತಿವರ್ಷ ಲಕ್ಷಾಂತರ ಗಿಡಗಳನ್ನು ನೆಡುವ ಮೂಲಕ ಪರಿಸರ ಜಾಗೃತಿ ಮೂಡಿಸುತ್ತಿದ್ದಾರೆ. ಅನ್ನದಾಸೋಹದ ಜತೆಗೆ "ಸಸ್ಯ ದಾಸೋಹ"ದ ಕಲ್ಪನೆಯನ್ನು ಮುಂದಿಟ್ಟಿದ್ದಾರೆ.

ಮರ ನೆಡುವುದು ಒಂದು ದಿನದ ಕಾರ್ಯಕ್ರಮವಲ್ಲ; ಭವಿಷ್ಯದ ಪೀಳಿಗೆಗೆ ಉಸಿರಿನ ದಾಸೋಹ ನೀಡುವ ಕಾರ್ಯ ಎಂಬ ಸಂದೇಶವನ್ನು ಜನರಿಗೆ ತಲುಪಿಸುತ್ತಿದ್ದಾರೆ.

ಜಲ ಸಂರಕ್ಷಣೆ :

ಬರ ಮತ್ತು ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಅವರು ಜಲಸಂರಕ್ಷಣೆಯತ್ತಲೂ ಗಮನ ಹರಿಸಿದ್ದಾರೆ.

ಕೊಪ್ಪಳ ತಾಲೂಕಿನ ಹಿರೇಹಳ್ಳದ ಪುನಶ್ಚೇತನಕ್ಕೆ ಮುಂದಾಗಿ,ಸುಮಾರು 25□26 ಕಿಲೋಮೀಟರ್ ವ್ಯಾಪ್ತಿಯ ಹಿರೇಹಳ್ಳವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ನಡೆಯಿತು. ಸರ್ಕಾರದ ಸಹಕಾರದೊಂದಿಗೆ ಬ್ಯಾರೇಜ್‌ಗಳನ್ನು ನಿರ್ಮಿಸಿ ನೀರು ಸಂಗ್ರಹಿಸುವ ವ್ಯವಸ್ಥೆಗೆ ಒತ್ತು ನೀಡಿದ್ದಾರೆ.

ಇದರಿಂದ ಗ್ರಾಮಗಳ ಜನರು ಹಾಗೂ ಜಾನುವಾರುಗಳಿಗೆ ನೀರಿನ ಅನುಕೂಲವಾಗುವುದರ ಜೊತೆಗೆ ಅಂತರ್ಜಲ ಮಟ್ಟ ಹೆಚ್ಚಿಸಲು ನೆರವಾಗಿದೆ. ಜಿಲ್ಲೆಯ ವಿವಿಧ ಕೆರೆಗಳ ಪುನಶ್ಚೇತನಕ್ಕೂ ಒತ್ತು ನೀಡಲಾಗಿದೆ. ಜಾತ್ರೆಯಲ್ಲಿ "ಜಲದೀಕ್ಷೆ"ಯಂತಹ ಅಭಿಯಾನಗಳ ಮೂಲಕ ನೀರಿನ ಸಂರಕ್ಷಣೆಯನ್ನು ಸಾಮಾಜಿಕ ಹಾಗೂ ಧಾರ್ಮಿಕ ಜಾಗೃತಿಯೊಂದಿಗೆ ಜೋಡಿಸಿದ್ದಾರೆ.

ಶಿಕ್ಷಣ ಮತ್ತು ಸಾಮಾಜಿಕ ಜಾಗೃತಿ :

ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳ ದೃಷ್ಟಿಯಲ್ಲಿ ಶಿಕ್ಷಣ ಸಮಾಜ ಪರಿವರ್ತನೆಯ ಪ್ರಮುಖ ಸಾಧನ.

ಮಹಿಳಾ ಶಿಕ್ಷಣ, ಯುವಜನರ ಶಿಕ್ಷಣ, ವಿಶೇಷ ಚೇತನರ ಕಲ್ಯಾಣ, ಬಾಲ್ಯವಿವಾಹ ವಿರೋಧಿ ಜಾಗೃತಿ ಹಾಗೂ ಗ್ರಾಮೀಣ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಉತ್ತೇಜನ ನೀಡುತ್ತಿದ್ದಾರೆ.

ಮಹಿಳೆಯರಿಗೆ ಉತ್ತಮ ಶಿಕ್ಷಣ ದೊರೆಯಬೇಕು ಎಂಬ ಆಶಯದಿಂದ ವಸತಿ ವ್ಯವಸ್ಥೆಯೊಂದಿಗೆ ಶಿಕ್ಷಣ ಸಂಸ್ಥೆಗಳ ನಿರ್ಮಾಣಕ್ಕೂ ಒತ್ತು ನೀಡಿದ್ದಾರೆ.

ಜ್ಞಾನ ದಾಸೋಹ :

ಅನ್ನದಾಸೋಹದಷ್ಟೇ ಜ್ಞಾನದಾಸೋಹವೂ ಮುಖ್ಯ ಎಂಬ ಚಿಂತನೆಯೊಂದಿಗೆ 24 ಗಂಟೆಗಳ ಗ್ರಂಥಾಲಯದಂತಹ ವ್ಯವಸ್ಥೆಗಳಿಗೆ ಉತ್ತೇಜನ ನೀಡಲಾಗಿದೆ.

ಗ್ರಂಥಾಲಯ, ಶಿಕ್ಷಣ ಸಂಸ್ಥೆಗಳು, ವಸತಿ ವ್ಯವಸ್ಥೆ ಮತ್ತು ಉಚಿತ ಶಿಕ್ಷಣದ ಮೂಲಕ ಜ್ಞಾನವನ್ನು ಎಲ್ಲರಿಗೂ ತಲುಪಿಸುವ ಪ್ರಯತ್ನ ನಡೆದಿದೆ.

ಐದು ಸಾವಿರ ಮಕ್ಕಳಿಗೆ ಉಚಿತ ಹಾಸ್ಟೆಲ್ :

ಯಾರೂ ಹಸಿವಿನಿಂದ ಮಲಗಬಾರದು

ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳ ಸೇವಾ ಚಿಂತನೆಯ ಮತ್ತೊಂದು ಪ್ರಮುಖ ಅಂಶ ಹಸಿವು ನಿವಾರಣೆ. ವಸತಿ, ಊಟದ ಕಾರಣಕ್ಕಾಗಿ ಯಾರೊಬ್ಬರೂ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಧ್ಯೇಯದೊಂದಿಗೆ ಸುಮಾರು ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸುಸಜ್ಜಿತ ಬೋರ್ಡಿಂಗ್ ಸ್ಥಾಪಿಸಿ, ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ.

ಇತ್ತೀಚೆಗೆ ಕೊಪ್ಪಳ ತಾಲ್ಲೂಕಿನ ಕೋಳೂರು ಗ್ರಾಮದ ಬಳಿ ವಿದ್ಯಾರ್ಥಿನಿಯರಿಗಾಗಿ ಉಚಿತ ಹೈಟೆಕ್ ವಸತಿ ಕಾಲೇಜು ಕೂಡ ಸ್ಥಾಪಿಸಿದ್ದಾರೆ.

ಕೋವಿಡ್ ಕಾಲದಲ್ಲಿ ಶ್ರೀ ಗವಿಮಠ ಮತ್ತು ಶ್ರೀಗಳು ತೋರಿದ ಸಾಮಾಜಿಕ ಕಾಳಜಿಯ ಕಾರ್ಯಗಳು ಪ್ರಶಂಸನೀಯವಾಗಿವೆ.

# ಅಂದ್ರಹಳ್ಳಿಯಲ್ಲಿ ಅ.11ರಂದು ವಿಶ್ವಕರ್ಮ ಜಯಂತ್ಯುತ್ಸವದ ಸಂಭ್ರಮ

ಬೆಂಗಳೂರು : ಮಾಜಿ ಸಚಿವ ಹಾಗೂ ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್ ಟಿ ಸೋಮಶೇಖರ್ ಅವರ ಮಾರ್ಗದರ್ಶನ ಸಹಕಾರ ಮತ್ತು ಅವರ ಕೃಪೆಯಿಂದ ಅಂದ್ರಹಳ್ಳಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹಾಗೂ ಭೈರವೇಶ್ವರ ಟಿಂಬರ್ಸ್ ಮಾಲೀಕ ಹೇಮಂತ್ ಮತ್ತು ಮಹಿಳಾ ಅಧ್ಯಕ್ಷೆ ಶ್ರೀಮತಿ ಕವಿತಾ ಸ್ವಾಮಿ ಆಚಾರ್ಯ ಹಾಗೂ ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ



ದಿನಾಂಕ 11-10-2026ರಂದು ಭಾನುವಾರ11-30ಕ್ಕೆ ಅಂದ್ರಹಳ್ಳಿಯ ಎಜಿಎನ್ ಕನ್ವೆನ್ಷನ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಂದ್ರಹಳ್ಳಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೇಮಂತ್ ತಿಳಿಸಿದ್ದಾರೆ.

ಈ ಕಾರ್ಯಕ್ರಮ ದಿವ್ಯ ಸಾನ್ನಿಧ್ಯ ಪರಮ ಪೂಜ್ಯ ಅನಂತ ಶ್ರೀ ವಿಭೂಷಿತ ಶಿವ ಸುಜ್ಞಾನ ತೀರ್ಥ ಮಹಾ ಸ್ವಾಮಿಗಳು ಮತ್ತು ಪೂಜ್ಯ ಶ್ರೀಶ್ರೀ ಜ್ಞಾನ ಘನವಿದ್ಯಾ ತೀರ್ಥ ಮಹಾ ಸ್ವಾಮಿಗಳು ವಿಶ್ವ ಬ್ರಾಹ್ಮಣ ಮಹಾಸಭಾ ಸಂಸ್ಥಾನ ವಿಶ್ವಕರ್ಮ ಜಗದ್ಗುರು ಪೀಠ ಅರೇಮಾದನಹಳ್ಳಿ ಮಠ, ಅಧ್ಯಕ್ಷತೆ

ಮಾಜಿ ಸಚಿವರು ಯಶವಂತಪುರ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಎಸ್ ಟಿ ಸೋಮಶೇಖರ್ ಗೌಡ್ರು, ಮುಖ್ಯ ಅತಿಥಿಗಳಾಗಿ ಡಿಕೆ ಸುರೇಶ್ ಮಾಜಿ ಸಂಸದರು ಅಧ್ಯಕ್ಷರು ಬಮುಲ್, ಉದ್ಘಾಟನೆ ಪಿ ಸುಜ್ಞಾನ ಮೂರ್ತಿ ಅಧ್ಯಕ್ಷರು ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಕರ್ನಾಟಕ ಸರ್ಕಾರ, ಕುಸುಮ ಹನುಮಂತರಾಯಪ್ಪ ಕಾಂಗ್ರೆಸ್ ಮಹಿಳಾ ಮುಖಂಡರು ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರ, ನೆ.ಲ ರಾಮ್ ಪ್ರಸಾದ್ ಗೌಡ ರಾಜ್ಯಾಧ್ಯಕ್ಷರು ಯುವ ಕನ್ನಡಿಗರ ಸೇನೆ,

ಪ್ರಸನ್ನಕುಮಾರ್ ಆರ್ ರಾಜ್ಯಾಧ್ಯಕ್ಷರು ಕೆಪಿಸಿಸಿ ಕುಶಲ ಕರ್ಮಿಗಳ ವಿಭಾಗ, ನಿಶಾಂತ್ ಸೋಮಶೇಖರ್ ಗೌಡ್ರು ಯುವ ಮುಖಂಡ, ಹನುಮಂತೇಗೌಡ್ರು ಮಾಜಿ ಪಾಲಿಕೆ ಸದಸ್ಯರು, ಪ್ರಕಾಶ್ ಟಿ ಕಾಂಗ್ರೆಸ್ ಮುಖಂಡರು ಹಾಗೂ ಜಿಬಿಎ ಪ್ರಭಲ ಆಕಾಂಕ್ಷಿ ಅಭ್ಯರ್ಥಿ ಅಂದ್ರಹಳ್ಳಿ ವಾರ್ಡ್, ಶ್ರೀ ನಿವಾಸ್ ಆರ್ ಕಾಂಗ್ರೆಸ್ ಮುಖಂಡರು ಹಾಗೂ ಜಿಬಿಎ ಪ್ರಬಲ ಆಕಾಂಕ್ಷಿ ಅಭ್ಯರ್ಥಿ ಹೆರೋಹಳ್ಳಿ ವಾರ್ಡ್ ಸೇರಿದಂತೆ ವಿವಿಧ ರಾಜಕೀಯ, ಸಂಘಟನೆಗಳ ಎಲ್ಲಾ ಸಮುದಾಯಗಳ ಮುಖಂಡರು ಮಹಿಳೆಯರು ಕಾರ್ಯಕರ್ತರು ಭಾಗವಹಿಸಲಿದ್ದಾರೆ.

ಅದಲ್ಲದೆ ಬೆಳ್ಳಿ ರಥದೊಂದಿಗೆ ಭಗವಾನ್ ವಿರಾಟ್ ವಿಶ್ವಕರ್ಮ ಭಾವಚಿತ್ರ ರಾಜ್ ಬೀದಿ ಗಳು ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

ವಿಶ್ವಕರ್ಮ ಸಂಘದ ಮುಖಂಡರಾದ ಹೆಚ್ ಇ ನಿಂಗಾಚಾರ್, ಹೆಚ್ ಬಿ ವೀರಾಚಾರ್, ಚಂದ್ರಶೇಖರ್, ಉಮೇಶ್, ರಾಜು, ಪ್ರಕಾಶ್,ರವಿ ಜಿ, ಮನೋಹನ್, ಸತೀಶ್ ಸೇರಿದಂತೆ ಅಂದ್ರಹಳ್ಳಿ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಮುಖಂಡ ಮಹಿಳೆಯರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

# ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸೆಪ್ಟೆಂಬರ್ 2026 ರಿಂದ ವಿದ್ಯಾರ್ಥಿವೇತನ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲ್ಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ವಿದ್ಯಾರ್ಥಿಗಳು ಜನವರಿ 31 2027 ರೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ Karnataka state scholarship portal ನ Student Login ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ವಿದ್ಯಾರ್ಥಿವೇತನ ಅರ್ಜಿಯ 5ನೇ ಹಂತದಲ್ಲಿ NSP OTR ನಂಬರ್ ಅವಶ್ಯಕತೆಯಿದ್ದು, ಮೊಬೈಲ್‌ನಲ್ಲಿ Play store ನಿಂದ NSP OTR app ಮತ್ತು Aadhar face RD app ನ್ನು ಡೌನ್‌ಲೋಡ್ ಮಾಡಿಕೊಂಡು ನಮೂದಿಸಬಹುದಾಗಿದೆ.ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ Acknowledgement Print ಮತ್ತು ಇತರೆ ಅಗತ್ಯ ದಾಖಲೆಗಳನ್ನು ಸಂಬಂಧಪಟ್ಟ ವಿದ್ಯಾಸಂಸ್ಥೆಯ Empowerment Officer ಗಳಿಗೆ ನೀಡಬಹುದಾಗಿದೆ. ಹ ' ಚ್ಜ ನ ' ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್-1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು ಡಾ॥ ಬಾಬು ಜಗಜೀವನರಾಂ ಭವನಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು-12, ಇವರನ್ನು ಹಾಗೂ ದೂ.ಸಂ-0821-2520910 ನ್ನು ಸಂಪರ್ಕಿಸಬಹುದೆಂದು ತಿಳಿಸಿದ್ದಾರೆ.

# ಕೆಜಿಗೆ ರೂ.5ಕ್ಕೆ ಕುಸಿದ ಹೂವಿನ ಬೆಲೆ!

## ಉತ್ತಮ ಇಳುವರಿ ಇದ್ದರೂ ರೈತರಿಗೆ ನಷ್ಟದ ಬರೆ । ಶಾಮಂತಿಗೆಗೆ ತುಸು ಉತ್ತಮ ಬೆಲೆ । ಪಿತೃಪಕ್ಷದ ಪರಿಣಾಮ ಹೂವಿನ ಬೇಡಿಕೆ ಇಳಿಕೆ



> ಎರಡು ದಿನದ ಹಿಂದೆ ಹೂವಿನ ಬೆಲೆ ತೀವ್ರ ಕುಸಿದಿತ್ತು. ಇದೀಗ ಸ್ವಲ್ಪ ಚೇತರಿಕೆ ಕಂಡುಬರುತ್ತಿದೆ. ದಸರಾ ಹಬ್ಬದಲ್ಲಿ ಬೆಲೆ ಏರಿಕೆಯಾಗಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ. ಪಿತೃಪಕ್ಷದಿಂದ ಹೂವಿನ ಬೆಲೆ ಕುಸಿತದಿಂದ ನಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ.
>
> **– ಮುನಿಶಾಮಿ । ರೈತ, ಕುಂದಾಣ**

> ದಸರಾ ಸಮೀಪಿಸುತ್ತಿರುವುದರಿಂದ ಹೂವಿನ ಬೆಲೆಗಳು ಸಾಮಾನ್ಯವಾಗಿ ಏರಿಕೆಯಾಗುತ್ತದೆ. ಬೆಳೆ ಆರಂಭಿಕ ಹಂತದಲ್ಲಿದ್ದರೆ ರೈತರಿಗೆ ಲಾಭವಾಗುವ ಸಾಧ್ಯತೆ ಇರುತ್ತದೆ. ಪಿತೃಪಕ್ಷ ಇರುವುದರಿಂದ ಹೂವಿನ ಬೇಡಿಕೆ ಇರುವುದಿಲ್ಲ. ದರ ಕಡಿತವಾಗುವುದು ಸರ್ವೆ ಸಾಮಾನ್ಯ. ತದನಂತರ ಬರುವ ದಸರಾ ಹಬ್ಬಕ್ಕೆ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ. ರೈತರು ದೃತಿಗೆಡಬಾರದು.
>
> **– ಮಲ್ಲಿಕಾರ್ಜುನ ಬಾಬು । ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ, ದೇವನಹಳ್ಳಿ**

ಬೆಂ.ಗ್ರಾ.ಜಿಲ್ಲೆ

ಬೆವರು ಸುರಿಸಿ ಬೆಳೆದ ಹೂವಿಗೆ ಬೆಲೆಯೇ ಇಲ್ಲದಂತಾಗಿದೆ. ಉತ್ತಮ ಇಳುವರಿ ಬಂದಿದ್ದರೂ ಮಾರುಕಟ್ಟೆಯಲ್ಲಿ ಹೂವಿನ ದರಗಳು ತೀವ್ರವಾಗಿ ಕುಸಿದಿರುವುದು ರೈತರನ್ನು ಸಂಕಷ್ಟಕ್ಕೆ ದೂಡಿದೆ. ಪ್ರತಿ ಕೆಜಿಗೆ ಕೇವಲ ರೂ.5ಕ್ಕೆ ಹೂವು ಮಾರಾಟವಾಗುತ್ತಿರುವುದರಿಂದ ಬೆಳೆ ಬೆಳೆಯಲು ಮಾಡಿದ ಖರ್ಚನ್ನೂ ವಾಪಸ್ ಪಡೆಯಲಾಗದೆ ಬೆಳೆಗಾರರು ಕಂಗಾಲಾಗಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲ ತಾಲೂಕುಗಳಲ್ಲಿ ಸುಮಾರು 3 ಸಾವಿರದಷ್ಟು ಹೂ ಬೆಳೆಗಾರರು ಇದ್ದಾರೆ. ಮಾರುಕಟ್ಟೆಯ ಬೆಲೆ ಏರಿಳಿತದ ಮೇಲೆ ರೈತರು ಅವಲಂಬಿತರಾಗಿದ್ದಾರೆ. ನೆರೆಯ ಕೋಲಾರ ಜಿಲ್ಲೆಯ ಅನೇಕ ಕಡೆಗಳಲ್ಲಿ ಚೆಂಡು ಸೇರಿದಂತೆ ಇತರೆ ಹೂವಿನ ಬೆಲೆ ಕುಸಿತ ರೈತರ ಆದಾಯಕ್ಕೆ ಹೊಡೆತ ನೀಡಿದೆ.

ಮಾರುಕಟ್ಟೆಯಲ್ಲಿ ಹೂವಿನ ದರ ಎಷ್ಟಿದೆ?

ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಅ.7ರಂದು ದಾಖಲಾಗಿರುವ ದರಗಳ ಪ್ರಕಾರ, ಕಲ್ಕತ್ತಾ ತಳಿಯ ಚೆಂಡು ಹೂವಿನ ಬೆಲೆ ಪ್ರತಿ ಕ್ವಿಂಟಾಲ್‌ಗೆ ಕನಿಷ್ಠ ರೂ.500, ಗರಿಷ್ಠ ರೂ.1,000 ಹಾಗೂ ಮಾದರಿ ದರ ರೂ.750 ಇತ್ತು. ಪ್ರತಿ ಕೆಜಿಗೆ ಸರಾಸರಿ ಮಾದರಿ ದರ ರೂ.7.50 ಆಗಿದೆ. ಇದು ಸಗಟು ಮಾರುಕಟ್ಟೆಯ ದರವಾಗಿದ್ದು, ರೈತರಿಗೆ ಸಿಗುವ ನೈಜ ಬೆಲೆ ಗುಣಮಟ್ಟ, ಖರೀದಿ ಮತ್ತು ಸಾಗಣೆ ವೆಚ್ಚವನ್ನು ಅವಲಂಬಿಸಿರುತ್ತದೆ. ಇದೇ ಮಾರುಕಟ್ಟೆಯಲ್ಲಿ ಸಡಿಲ ಶಾಮಂತಿಗೆ ಹೂವಿನ ದರ ಪ್ರತಿ ಕ್ವಿಂಟಾಲ್‌ಗೆ ರೂ.5-15 ಸಾವಿರದವರೆಗೆ ದಾಖಲಾಗಿದ್ದು, ಮಾದರಿ ದರ ರೂ.10ಸಾವಿರ ಇತ್ತು. ಅಂದರೆ ಪ್ರತಿ ಕೆಜಿಗೆ ಮಾದರಿ ಸಗಟು ದರ ರೂ.100 ಆಗಿದೆ. ಹೀಗಾಗಿ ಹೂವಿನ ತಳಿ, ಗುಣಮಟ್ಟ ಮತ್ತು ಬೇಡಿಕೆಗೆ ಅನುಗುಣವಾಗಿ ದರದಲ್ಲಿ ಭಾರಿ ವ್ಯತ್ಯಾಸ ಕಂಡುಬರುತ್ತಿದೆ.

ಎಕರೆಗೆ 1 ಲಕ್ಷ ರೂ. ವೆಚ್ಚ:

ಚೆಂಡು, ಶಾಮಂತಿಗೆ, ಇತರೆ ಹೂವು ಬೆಳೆಯಲು ಎಕರೆಗೆ ಸುಮಾರು 1 ಲಕ್ಷ ರೂ.ವರೆಗೆ ಖರ್ಚಾಗುತ್ತದೆ. ಸುಮಾರು 2 ತಿಂಗಳಲ್ಲಿ ಬೆಳೆ ಕಟಾವಿಗೆ ಸಿದ್ಧವಾಗುತ್ತದೆ. ಉತ್ತಮ ಇಳುವರಿ ಬಂದರೆ 8-10 ಬಾರಿ ಹೂವು ಕಟಾವು ಮಾಡಬಹುದು. ಎಕರೆಗೆ ಸುಮಾರು 25 ಕ್ವಿಂಟಾಲ್‌ನಷ್ಟು ಇಳುವರಿ ದೊರೆಯುವ ಸಾಧ್ಯತೆಯಿದೆ. ಆದರೆ ಪ್ರತಿ ಕೆಜಿಗೆ ರೂ.5-7.50ರ ಆಸುಪಾಸಿನಲ್ಲಿ ಬೆಲೆ ದೊರೆತರೆ ರೈತರಿಗೆ ಕೃಷಿ ವೆಚ್ಚ ಭರಿಸುವುದೇ ಕಷ್ಟವಾಗುತ್ತದೆ. ಕಟಾವು, ಕಾರ್ಮಿಕರ ಕೂಲಿ, ಸಾಗಣೆ ಸೇರಿದಂತೆ ಇತರ ವೆಚ್ಚಗಳನ್ನು ಕಳೆದ ಬಳಿಕ ಕೈಗೆ ಉಳಿಯುವ ಹಣ ಅಲ್ಪವಾಗುತ್ತದೆ. ಹೀಗಾಗಿ ಕೆಲವು ರೈತರು ಹೂವುಗಳನ್ನು ಕಟಾವು ಮಾಡದೆ ಹೊಲದಲ್ಲೇ ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪಿತೃಪಕ್ಷದಿಂದ ಬೇಡಿಕೆ ಕುಸಿತ:

ಪಿತೃಪಕ್ಷದ ಸಂದರ್ಭದಲ್ಲಿ ಶುಭ ಸಮಾರಂಭಗಳು ಕಡಿಮೆಯಾಗುವುದರಿಂದ ಹೂವಿನ ಬೇಡಿಕೆ ಕುಸಿಯುತ್ತದೆ. ಸ್ಥಳೀಯ ಮಾರುಕಟ್ಟೆಯ ಜತೆಗೆ ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಮಾರುಕಟ್ಟೆಗಳಿಗೂ ಹೂವು ಸಾಗಣೆಯಾಗುತ್ತದೆ. ಅಲ್ಲಿಯೂ ಬೇಡಿಕೆ ಕಡಿಮೆಯಾದರೆ ವ್ಯಾಪಾರಿಗಳು ಖರೀದಿಸುವ ಪ್ರಮಾಣ ಇಳಿಕೆಯಾಗುತ್ತದೆ. ಇದರ ಪರಿಣಾಮ ಬೆಲೆ ಕುಸಿದು ರೈತರು ನಷ್ಟ ಅನುಭವಿಸುವಂತಾಗಿದೆ.

ನೀರಿನ ಕೊರತೆ, ಬೆಲೆ ಕುಸಿತದ ಹೊಡೆತ:

ಮಳೆ ಕೊರತೆ ಹಾಗೂ ಅಂತರ್ಜಲ ಮಟ್ಟ ಕುಸಿತದ ನಡುವೆ ರೈತರು ಲಭ್ಯವಿರುವ ನೀರಿನಿಂದ ಬೆಳೆ ಉಳಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಉತ್ತಮ ಇಳುವರಿ ಬಂದರೂ ಸೂಕ್ತ ಬೆಲೆ ಸಿಗದಿದ್ದರೆ ಕೃಷಿಗೆ ಮಾಡಿದ ಹೂಡಿಕೆ ನಷ್ಟವಾಗುತ್ತದೆ. ಇತರೆ ತರಕಾರಿ ಬೆಳೆಗಳಲ್ಲಿಯೂ ಕೀಟ ಮತ್ತು ರೋಗಬಾಧೆ ಕಾಣಿಸಿಕೊಂಡರೆ ರೈತರ ಆರ್ಥಿಕ ಸಂಕಷ್ಟ ಮತ್ತಷ್ಟು ಹೆಚ್ಚಾಗುತ್ತದೆ.

# ಐತಿಹಾಸಿಕ ದರ್ಗಾ ಅಭಿವೃದ್ಧಿಗೆ 1 ಕೋಟಿ ಅನುದಾನ

## ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಆರ್. ಮಂಜುನಾಥ್ ಭೂಮಿಪೂಜೆ

ಕೊಳ್ಳೇಗಾಲ.ಅ.9.ಹನೂರು ವಿಧಾನಸಭಾ ಕ್ಷೇತ್ರದ ಸತ್ಯಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐತಿಹಾಸಿಕ ದರ್ಗಾಕ್ಕೆ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಸುಮಾರು 1 ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಆರ್. ಮಂಜುನಾಥ್ ಅವರು ಭೂಮಿಪೂಜೆ ನೆರವೇರಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಈ ದರ್ಗಾ ಧಾರ್ಮಿಕ ನಂಬಿಕೆ ಹಾಗೂ ಸರ್ವಧರ್ಮಗಳ ಭಾವೈಕ್ಯತೆಯ ಪ್ರತೀಕವಾಗಿದೆ. ಚಾಮರಾಜನಗರ, ಹನೂರು, ಕೊಳ್ಳೇಗಾಲ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಹಾಗೂ ಚಿಕ್ಕಬಳ್ಳಾಪುರ, ಚಿಂತಾಮಣಿ ಭಾಗಗಳಿಂದಲೂ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಇಂತಹ ಐತಿಹಾಸಿಕ ಧಾರ್ಮಿಕ ಕ್ಷೇತ್ರದ ಅಭಿವೃದ್ಧಿ ಹಾಗೂ ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ದರ್ಗಾಕ್ಕೆ ಆಗಮಿಸುವ ಭಕ್ತರು ಮತ್ತು ಪ್ರವಾಸಿಗರಿಗೆ ಅನುಕೂಲವಾಗುವಂತೆ ಸಿಸಿ ರಸ್ತೆ, ಚರಂಡಿ ಹಾಗೂ ಶೌಚಾಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಕಾಮಗಾರಿಯಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ರಸ್ತೆ ಮತ್ತು ಚರಂಡಿ ಕಾಮಗಾರಿಗೆ ವಿಶೇಷ ಅನುದಾನ ದಲ್ಲಿ ಸುಮಾರು 1 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಶೌಚಾಲಯ ನಿರ್ಮಾಣಕ್ಕೆ ಪ್ರತ್ಯೇಕ ಅನುದಾನ ಒದಗಿಸಲಾಗುವುದು ಎಂದು ತಿಳಿಸಿದರು. ಇದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಉಳಿತಾಯ ಅನುದಾನದಿಂದ ದರ್ಗಾಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಯೂ ನಡೆಯುತ್ತಿದೆ. ವಕ್ಫ್ ಬೋರ್ಡ್‌ನಿಂದ ದರ್ಗಾ ಅಭಿವೃದ್ಧಿಗಾಗಿ 8.5 ಕೋಟಿ ಅನುದಾನ ಕಾಯ್ದಿರಿಸಿರುವ ಬಗ್ಗೆ ಮಾಹಿತಿ ಇದೆ. ಈ ಹಿಂದೆ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಭೇಟಿಯಾಗಿ ಅಭಿವೃದ್ಧಿಗೆ ಮನವಿ ಸಲ್ಲಿಸಲಾಗಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಂಗಡಿ ಮಾಲೀಕರ ಸಮಸ್ಯೆಗಳನ್ನು ಬಗೆಹರಿಸಿದ ಬಳಿಕ ಫುಡ್ ಕೋರ್ಟ್ ಮಾದರಿಯಲ್ಲಿ ಶಾಶ್ವತ ವ್ಯವಸ್ಥೆ ಕಲ್ಪಿಸಿ, ದರ್ಗಾ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗಿದೆ ಎಂದರು.

ಮುಂದಿನ ಮೂರುರಿಂದ ಆರು ತಿಂಗಳ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಪ್ರಸ್ತುತ ದರ್ಗಾಕ್ಕೆ ಬರುವ ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಮೊದಲ ಆದ್ಯತೆಯಾಗಿದೆ. ಆರಂಭಿಸಿರುವ ಕಾಮಗಾರಿಗಳ ಪ್ರಗತಿಯನ್ನು ನಿರಂತರವಾಗಿ ಪರಿಶೀಲಿಸಿ, ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ಪೂರ್ಣಗೊಳ್ಳುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಎಂ.ಆರ್. ಮಂಜುನಾಥ್ ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ಎಇಇ ಕುಮಾರ್,ಎಇ ಮಂಜು, ಇಂಜಿನಿಯರ್ ರಂಗನಾಥ್, ಸತ್ತೇಗಾಲ ಮಾಜಿ ಗ್ರಾಮ ಪಂ ಅಧ್ಯಕ್ಷ ಮಲ್ಲೇಶ್,ಮುಖಂಡರುಗಳಾದ ಪ್ರಭುಸ್ವಾಮಿ, ಮಹಾದೇವ,ನಂಜುಂಡ, ನಾಗರಾಜು, ಶಾಂತರಾಜು, ಪನ್ನಾಡಿ ನಾಯ್ಕ, ವಿನ್ಸೆಂಟ್, ಜಮೀರ್, ರಾಹುಲಯ್ಯ,ಲೂರ್ದ್ ಸ್ವಾಮಿ, ವೆಂಕಟಾಚಲ,ಸೇರಿದಂತೆ ಇನ್ನಿತರರು ಇದ್ದರು...

## ದಸರಾ ಉತ್ಸವ : ನಾಳಿನ ಕಾರ್ಯಕ್ರಮಗಳು

ತುಮಕೂರು(ಕ.ವಾ.)ಅ.9: ದಸರಾ ಉತ್ಸವ ಪ್ರಯುಕ್ತ ನಗರದ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ಪ್ರತಿಷ್ಠಾಪಿಸುವ ಚಾಮುಂಡೇಶ್ವರಿ ದೇವಿಗೆ ಮೊದಲ ದಿನ(ಅಕ್ಟೋಬರ್ 11)ವಾದ ಭಾನುವಾರದಂದು ಶೈಲಪುತ್ರಿ ಅಲಂಕಾರ ಮಾಡಲಾಗುವುದು ಎಂದು ದಸರಾ ಉತ್ಸವ ಧಾರ್ಮಿಕ ಆಚರಣೆ ಸಮಿತಿ ಅಧ್ಯಕ್ಷ ಹಾಗೂ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ನವರಾತ್ರಿ ಅಂಗವಾಗಿ ಅಂದು ಬೆಳಗ್ಗೆ 6 ಗಂಟೆ ಬ್ರಾಹ್ಮಿಮುಹೂರ್ತದಲ್ಲಿ ಗಂಗಾಪೂಜೆ-ಗೋಪೂಜೆ-ಯಾಗಶಾಲಾ ಪ್ರವೇಶ-ಗಣಪತಿ ಆರಾಧನೆ-ಪುಣ್ಯಾಹಃ ಮತ್ತು ಕಳಸಾರಾಧನೆ ನಡೆಯಲಿದೆ. ನಂತರ ಬೆಳಗ್ಗೆ 7 ಗಂಟೆಗೆ ದೇವಿಗೆ ಪಂಚಾಮೃತ ಅಭಿಷೇಕ, ಅಗ್ನಿ ಪ್ರತಿಷ್ಠಾಪನೆ, ಗಣಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಶ್ರೀ ದುರ್ಗಾ ಹೋಮಗಳು ಜರುಗಲಿವೆ.

ಬೆಳಗ್ಗೆ 8 ಗಂಟೆಗೆ ಗಣ್ಯರಿಗೆ ಪೂರ್ಣಕುಂಭ ಸ್ವಾಗತ, ಬೆಳಗ್ಗೆ 8-30 ಗಂಟೆಗೆ ಧ್ವಜಾರೋಹಣ, ಬೆಳಗ್ಗೆ 9 ಗಂಟೆಗೆ ಗಣ್ಯರಿಂದ ಶ್ರೀ ದುರ್ಗಾಮಾತೆಯ ಆರಾಧನೆ ಮತ್ತು ಮಹಾ ಸಂಕಲ್ಪ, ಬೆಳಗ್ಗೆ 9.30 ಗಂಟೆಗೆ ಪೂರ್ಣಾಹುತಿ, ಅಷ್ಠಾವದಾನ ಸೇವೆ, ಬೆಳಗ್ಗೆ 10.30 ಗಂಟೆಗೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಜರುಗಲಿವೆ ಎಂದು ಅವರು ತಿಳಿಸಿದ್ದಾರೆ.

## ಅ.12 ರಿಂದ ಪುಸ್ತಕ ಪ್ರದರ್ಶನ

ತುಮಕೂರು(ಕ.ವಾ. : ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತಾಲಯವು ಅಕ್ಟೋಬರ್ 12 ರಿಂದ 14ರವರೆಗೆ ಪ್ರತಿ ದಿನ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಪುಸ್ತಕ ಪ್ರದರ್ಶನ ಏರ್ಪಡಿಸಿದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕಿ ಶೈಲಜ ಎಂ.ಎಸ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುಸ್ತಕ ಪ್ರದರ್ಶನವು ಬೆಂಗಳೂರು ವಿಜಯನಗರ ಎಂ.ಸಿ. ಬಡಾವಣೆ(ಡಾ: ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ)ಯಲ್ಲಿರುವ ವಿಷ್ಣುವರ್ಧನ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರದ ಗ್ರಂಥಾಲಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

# ಕೆ.ಎ.ಎಸ್ 2026 ಪೂರ್ವಭಾವಿ ಪರೀಕ್ಷೆಗೆ ಉಚಿತ ತರಬೇತಿ ಮತ್ತು ಅಣುಕು ಪರೀಕ್ಷೆ

ಮೈಸೂರು,ಅ.9(ಕರ್ನಾಟಕ ವಾರ್ತೆ):- ನಗರ ಕೇಂದ್ರ ಗ್ರಂಥಾಲಯದ ಮೈಸೂರು ಹಾಗೂ ಬೆಂಗಳೂರಿನ ಜ್ಞಾನ ಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ ಸಂಯುಕ್ತಾಶ್ರಯದಲ್ಲಿ ಕೆ.ಎ.ಎಸ್ 2026 ಪೂರ್ವಭಾವಿ ಪರೀಕ್ಷೆಗೆ ವಿಶೇಷ ಮಾರ್ಗದರ್ಶನ ಸಂಬಂಧ ಮೂವತ್ತು ದಿನಗಳ ಅವಧಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ದೆಹಲಿಯ ವಿಷನ್ ಐಎಎಸ್ ಕಿರಿಯ ಶೈಕ್ಷಣಿಕ ಮಾರ್ಗದರ್ಶಕರಾದ ಶ್ರೀನಿಧಿ.ಬಿ ಅವರ ಮಾರ್ಗದರ್ಶನದಲ್ಲಿ ವಿಶೇಷ ಉಪನ್ಯಾಸ, ಪ್ರಚಲಿತ ವಿದ್ಯಮಾನಗಳ ಗುಂಪು ಚರ್ಚೆ, ಅಣುಕು ಪರೀಕ್ಷೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ಉಚಿತವಾಗಿ ಅಯೋಜಿಸಲಾಗಿದ್ದು, ಇದರಲ್ಲಿ ಭಾಗವಹಿಸಲು ಇಚ್ಚಿಸುವ ಅಭ್ಯರ್ಥಿಗಳು ನಗರ ಕೇಂದ್ರ ಗ್ರಂಥಾಲಯ, ಪೀಪಲ್ಸ್ ಪಾರ್ಕ್, ಮೈಸೂರು ಇಲ್ಲಿ ತಮ್ಮ ಹೆಸರನ್ನು ಅಕ್ಟೋಬರ್ 12 ರ ಬೆಳಿಗ್ಗೆ 10.00 ಗಂಟೆ ಒಳಗೆ ಖುದ್ದಾಗಿ ಅಥವಾ ದೂರವಾಣಿ (0821-2423678/2430343) ಮುಖಾಂತರ ನೊಂದಾಯಿಸಿಕೊಳ್ಳಬಹುದಾಗಿದೆ. ಪೀಪಲ್ಸ್ ಪಾರ್ಕ್ ಗ್ರಂಥಾಲಯ ಸೇರಿದಂತೆ ಮೈಸೂರು ಜಿಲ್ಲೆಯ ಹಾಗೂ ನಗರದ ವಿವಿಧ ಬಡಾವಣೆಗಳಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸದರಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು ಕೂಡ ನೋಂದಾಯಿಸಿ ಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹ ಗ್ರಂಥಪಾಲಕರು ಸೌಮ್ಯ .ಎಸ್. ಅವರ ಮೊಬೈಲ್ ಸಂಖ್ಯೆ: 9008989097 ನ್ನು ಸಂಪರ್ಕಿಸಬಹುದೆಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 21ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನ

ಮೈಸೂರು: ಮಾನಸಗಂಗೋತ್ರಿ ತೋಟಗಾರಿಕಾ ವಿಭಾಗದ ವತಿಯಿಂದ 21ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನವನ್ನು ಅ.13ರಿಂದ 21ವರೆಗೆ ಮೈಸೂರು ವಿವಿ ಕುಕ್ಕರಹಳ್ಳಿಕೆರೆಯ ಪೂರ್ವ ಮತ್ತು ಪಶ್ಚಿಮ ದಂಡೆಯಲ್ಲಿ ಆಯೋಜಿಸಲಾಗಿದ್ದು, ಅಕ್ಟೋಬರ್ 13 ರಂದು ಸಂಜೆ 5.30 ಕ್ಕೆ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಉದ್ಘಾಟನೆ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಯಾದ ಪ್ರೊ. ಎಸ್.ಜೆ. ಮಂಜುನಾಥ್, ಪರೀಕ್ಷಾಂಗ ಕುಲಸಚಿವರು ಹಾಗೂ ಮೈಸೂರು ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಯ ಸದಸ್ಯರಾದ ಪ್ರೊ. ಬಿ.ಕೆ. ಕೆಂಪೇಗೌಡ ಅವರು ಉಪಸ್ಥಿತರಿರಲಿದ್ದಾರೆ.

# ರಾಜ್ಯದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳ; 700ರ ಗಡಿ ತಲುಪಿದ ಸಂಖ್ಯೆ!

ಬೆಂಗಳೂರು: ದೇಶದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಹೆಮ್ಮೆಯ ರಾಜ್ಯಗಳಲ್ಲಿ ಒಂದಾದ ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಮತ್ತಷ್ಟು ವೃದ್ಧಿಯಾಗಿದೆ.

ರಾಜ್ಯದ ಅರಣ್ಯಗಳಲ್ಲಿ ಹುಲಿಗಳ ಸಂಖ್ಯೆ ಈಗ ಸುಮಾರು 700 ಕ್ಕೆ ಏರಿಕೆಯಾಗಿದೆ ಎಂದು ಅರಣ್ಯ ಇಲಾಖೆಯ ಪ್ರಾಥಮಿಕ ವರದಿಯಿಂದ ತಿಳಿದುಬಂದಿದೆ. 2022 ರ ಹುಲಿ ಗಣತಿಯಲ್ಲಿ ರಾಜ್ಯದಲ್ಲಿ 563 ಹುಲಿಗಳು ದಾಖಲಾಗಿದ್ದವು.

ನಮ್ಮ ಮೌಲ್ಯಮಾಪನದ ಪ್ರಕಾರ ರಾಜ್ಯದಲ್ಲಿ ಸುಮಾರು 700 ಹುಲಿಗಳಿವೆ. ಹುಲಿಗಳ ಸಂಖ್ಯೆ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ವನ್ಯಜೀವಿ ಅಭಯಾರಣ್ಯಗಳಲ್ಲಿ ಮಾತ್ರವಲ್ಲದೆ, ಪ್ರಾದೇಶಿಕ ಅರಣ್ಯ ವಿಭಾಗಗಳು ಹಾಗೂ ಅರಣ್ಯದ ಹೊರಭಾಗಗಳಲ್ಲಿಯೂ ಹೆಚ್ಚುತ್ತಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ತಿಳಿಸಿದ್ದಾರೆ.

ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಉತ್ತಮ ಸಂರಕ್ಷಣಾ ಕಾರ್ಯಗಳ ಸೂಚನೆಯಾದರೂ, ಇದರೊಂದಿಗೆ ಮಾನವ?ವನ್ಯಜೀವಿ ಸಂಘರ್ಷವೂ ಹೆಚ್ಚುತ್ತಿದೆ. ಹೀಗಾಗಿ ಸಂಘರ್ಷ ತಡೆಗಟ್ಟಲು ಕಠಿಣ ಕ್ರಮಗಳನ್ನು ರೂಪಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಅಕ್ಟೋಬರ್ 2ರಿಂದ ಆರಂಭವಾಗಿರುವ 72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಒಂದು ದಿನದ ಸಮಾವೇಶದಲ್ಲಿ ?ಕರ್ನಾಟಕದ ಸಂರಕ್ಷಣಾ ಪರಂಪರೆ: ಸಂರಕ್ಷಿತ ಪ್ರದೇಶಗಳು, ವನ್ಯಜೀವಿ ಭೂದೃಶ್ಯಗಳು ಮತ್ತು ಮುಂದಿನ ದಶಕ? ವಿಷಯದ ಕುರಿತು ಅವರು ಮಾತನಾಡಿದರು.

ದೇಶಾದ್ಯಂತವೂ ಹುಲಿಗಳ ಸಂಖ್ಯೆ ಏರಿಕೆಯಾಗುತ್ತಿದೆ. ಕರ್ನಾಟಕದ ಜತೆಗೆ ಮಧ್ಯಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿಯೂ ಹುಲಿಗಳ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡುಬರುವ ನಿರೀಕ್ಷೆಯಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ 2022ರ ಹುಲಿ ಗಣತಿ ವರದಿಯ ಪ್ರಕಾರ, ಮಧ್ಯಪ್ರದೇಶದ ಬಳಿಕ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿತ್ತು. ಹುಲಿ ಗಣತಿ ಪ್ರಕ್ರಿಯೆ 2025ರ ನವೆಂಬರ್‌ನಲ್ಲಿ ಆರಂಭವಾಗಿ 2026ರ ಮೇ ತಿಂಗಳಲ್ಲಿ ಪೂರ್ಣಗೊಂಡಿದೆ. ದತ್ತಾಂಶವನ್ನು ಸಂಗ್ರಹಿಸಿ ಅಂತಿಮ ಪರಿಶೀಲನೆ ಮತ್ತು ವರದಿ ಬಿಡುಗಡೆಗಾಗಿ ಸಚಿವಾಲಯಕ್ಕೆ ಕಳುಹಿಸಲಾಗಿದೆ.

ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಸ್ಥಿರತೆಯತ್ತ ಸಾಗಿದ್ದು, ಹುಲಿಗಳು ಸೇರಿದಂತೆ ಎಲ್ಲ ವನ್ಯಜೀವಿಗಳ ನಿರ್ವಹಣೆ ಮತ್ತು ಮಾನವ?ವನ್ಯಜೀವಿ ಸಂಘರ್ಷ



ತಗ್ಗಿಸಲು ಸಕ್ರಿಯ ಕ್ರಮಗಳ ಅಗತ್ಯವಿದೆ ಎಂದು ಪುಷ್ಕರ್ ಹೇಳಿದರು.

ಆನೆಗಳ ಸಂಖ್ಯೆಯಲ್ಲಿನ ಏರಿಕೆಯ ಬಗ್ಗೆಯೂ ಪ್ರಸ್ತಾಪಿಸಿದ ಅವರು, ದೇಶದಲ್ಲೇ ಕರ್ನಾಟಕ ಅತಿ ಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯವಾಗಿ ಮೊದಲ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಆನೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ಪ್ರತ್ಯೇಕ ಆನೆ ಕಾರಿಡಾರ್ ನೀತಿಯನ್ನು ರೂಪಿಸಲಾಗುತ್ತಿದ್ದು, ಶೀಘ್ರದಲ್ಲೇ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸಲಾಗುವುದು ಎಂದರು.

ಈ ನೀತಿಯಡಿ ಈಗಿರುವ ಆನೆ ಕಾರಿಡಾರ್‌ಗಳನ್ನು ಮತ್ತಷ್ಟು ಬಲಪಡಿಸಿ ಸಂರಕ್ಷಿಸಲಾಗುವುದು. ಈ ಹಿಂದೆ ಅಸ್ತಿತ್ವದಲ್ಲಿದ್ದು ಕಳೆದುಹೋಗಿರುವ ಕಾರಿಡಾರ್‌ಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳನ್ನೂ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕರ್ನಾಟಕದ ಕಾಫಿ ತೋಟಗಳಲ್ಲಿ ಮತ್ತು ಸುತ್ತಮುತ್ತ ವಾಸಿಸುವ ಆನೆಗಳ ಸಂತಾನ ನಿಯಂತ್ರಣಕ್ಕಾಗಿ ರೋಗನಿರೋಧಕ ಆಧಾರಿತ ಗರ್ಭನಿರೋಧಕ ವಿಧಾನವನ್ನು ಅನುಸರಿಸುವ ಕುರಿತು ವೈಜ್ಞಾನಿಕ ಹಾಗೂ ಕಾನೂನು ತಜ್ಞರೊಂದಿಗೆ ಚರ್ಚೆಗಳು ನಡೆಯುತ್ತಿವೆ.

ಕಾಡುಕೋಣಗಳ ಸಂಖ್ಯೆ ನಿಯಂತ್ರಿಸುವ ಬಗ್ಗೆಯೂ ಕ್ರಮಗಳನ್ನು ಪರಿಶೀಲಿಸಲಾಗುತ್ತಿದೆ. ಮಾನವ?ಕಾಡುಕೋಣ ಸಂಘರ್ಷದ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಾವಿನ ಕಡಿತವನ್ನು ಅಧಿಸೂಚಿತ ರೋಗವೆಂದು ಘೋಷಿಸಿದ ದೇಶದ ಮೊದಲ ರಾಜ್ಯ ಕರ್ನಾಟಕವಾಗಿದೆ. ಹಾವು ಹಿಡಿಯುವವರು ಮತ್ತು ತಜ್ಞರ ಸುರಕ್ಷತೆ ಹಾಗೂ ರಕ್ಷಣೆಗಾಗಿ ಸರ್ಕಾರ ಹಲವು ನಿಯಮಗಳನ್ನು ರೂಪಿಸಲು ಮುಂದಾಗಿದೆ ಎಂದು ಪುಷ್ಕರ್ ಹೇಳಿದರು.

ಹಾವುಗಳನ್ನು ಹಿಡಿಯುವುದು, ರಕ್ಷಿಸುವುದು ಮತ್ತು ಪುನರ್ವಸತಿ ಕಲ್ಪಿಸುವುದಕ್ಕೆ ಸಂಬಂಧಿಸಿದ ನಿಯಮಾವಳಿಗಳು ಹಾಗೂ ಕಾರ್ಯವಿಧಾನಗಳನ್ನೂ ಸಿದ್ಧಪಡಿಸಲಾಗುತ್ತಿದೆ. ನೋಂದಾಯಿತ ಹಾವು

**2025-26ನೇ ಸಾಲಿನಲ್ಲಿ**
**ಮಾನವ-ವನ್ಯಜೀವಿ ಸಂಘರ್ಷ**
ಮಾನವ ಸಾವುಗಳು: 51
ಮಾನವರಿಗೆ ಗಾಯಗಳು: 368
ಜಾನುವಾರು ನಷ್ಟ: 6,351
ಬೆಳೆ ನಷ್ಟದ ಪ್ರಕರಣಗಳು: 41,755
ದೇಶದಲ್ಲಿ ಕರ್ನಾಟಕದ ಸ್ಥಾನ
ಆನೆಗಳು: 6,395 – ಮೊದಲ ಸ್ಥಾನ
ಹುಲಿಗಳು: 563 – ಎರಡನೇ ಸ್ಥಾನ
ಚಿರತೆಗಳು: 1,879 – ಮೂರನೇ ಸ್ಥಾನ

ಹಿಡಿಯುವವರ ಪಟ್ಟಿಯನ್ನು ಸಿದ್ಧಪಡಿಸಿ, ಸಾರ್ವಜನಿಕರು ಸುಲಭವಾಗಿ ಮಾಹಿತಿ ಪಡೆಯಲು ಅದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ನಗರ ಪ್ರದೇಶಗಳಲ್ಲಿ ಮತ್ತಷ್ಟು ಟ್ರೀ ಪಾರ್ಕ್‌ಗಳ ನಿರ್ಮಾಣ: ರಾಮಲಿಂಗಾ ರೆಡ್ಡಿ

ಬೆಂಗಳೂರು ಸೇರಿದಂತೆ ರಾಜ್ಯದ ನಗರ ಪ್ರದೇಶಗಳಲ್ಲಿ ಹಸಿರು ಪ್ರದೇಶಗಳನ್ನು ಹೆಚ್ಚಿಸಲು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಮತ್ತಷ್ಟು ಟ್ರೀ ಪಾರ್ಕ್‌ಗಳನ್ನು ನಿರ್ಮಿಸಲು ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಅವರು ಗುರುವಾರ ತಿಳಿಸಿದ್ದಾರೆ.

72ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ಅರಣ್ಯ ಇಲಾಖೆ ಆಯೋಜಿಸಿದ್ದ ಬೆಂಗಳೂರು ಸಮಾವೇಶದಲ್ಲಿ ಮಾತನಾಡಿದ ಅವರು, ನಗರೀಕರಣದ ಪರಿಣಾಮವಾಗಿ ಹಸಿರು ಪ್ರದೇಶಗಳು ಕ್ರಮೇಣ ಕುಗ್ಗುತ್ತಿವೆ ಎಂದು ಹೇಳಿದರು.

ವಿಧಾನಸೌಧ ಮತ್ತು ಹೈಕೋರ್ಟ್ ಸೇರಿದಂತೆ ಕಚೇರಿ ಕಟ್ಟಡಗಳು ಹಾಗೂ ಸಂಕೀರ್ಣಗಳ ನಿರ್ಮಾಣದಿಂದ ಕಬ್ಬನ್ ಪಾರ್ಕ್‌ನ ಹಸಿರು ಪ್ರದೇಶವೂ ಕಡಿಮೆಯಾಗಿದೆ ಎಂದು ಅವರು ತಿಳಿಸಿದರು. ಹಸಿರು ಪ್ರದೇಶಗಳನ್ನು ಸಂರಕ್ಷಿಸುವುದು ಅರಣ್ಯ ಇಲಾಖೆ ಅಥವಾ ಸರ್ಕಾರದ ಜವಾಬ್ದಾರಿ ಮಾತ್ರವಲ್ಲ; ಜನರ ಸಹಭಾಗಿತ್ವವೂ ಅಗತ್ಯ ಎಂದರು.

ಕರ್ನಾಟಕದ ಅರಣ್ಯ ಪ್ರದೇಶವು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದ ಸುಮಾರು ಶೇ.20ರಷ್ಟಿದೆ. ಮಾಲಿನ್ಯ ಮತ್ತು ಮಾನವ?ವನ್ಯಜೀವಿ ಸಂಘರ್ಷದ ಪರಿಣಾಮಗಳನ್ನು ಎದುರಿಸಲು ಅರಣ್ಯ ಪ್ರದೇಶವನ್ನು ಮತ್ತಷ್ಟು ಹೆಚ್ಚಿಸುವ ಅಗತ್ಯವಿದೆ ಎಂದು ಸಚಿವರು ಹೇಳಿದರು. ಈ ನಿಟ್ಟಿನಲ್ಲಿ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಹೇಳಿದರು.

ಸಮಾವೇಶದ ಸಂದರ್ಭದಲ್ಲಿ ಸಚಿವರು ಕ್ರಾಸಿಂಗ್ ಪಾತ್ಸ್, ಲಂಗ್ಸ್ ಆಫ್ ಬೆಂಗಳೂರು ಮತ್ತು ಎಲಿಫೆಂಟ್ ಟಾಸ್ಕ್ ಫೋರ್ಸ್ ರಾಮನಗರ ಎಂಬ ಮೂರು ಸಾಕ್ಷ್ಯಚಿತ್ರಗಳನ್ನು ಬಿಡುಗಡೆ ಮಾಡಿದರು.

# ಬೇಕಾದರೆ ನನ್ನ ವಿರುದ್ಧವೂ ಫಾರ್ಮ್-7 ಸಲ್ಲಿಸಿ
## ಕಾಂಗ್ರೆಸ್‌ಗೆ ಸಂಸದ ಯದುವೀರ್ ಒಡೆಯರ್ ಸವಾಲು

ಮಡಿಕೇರಿ: ಸರಿಯಾದ ಸಾಕ್ಷಿ ಆಧಾರವಿಲ್ಲದೇ ಫಾರ್ಮ್-7 ದುರ್ಬಳಕೆ ಎಂದು ಆರೋಪ ಮಾಡುವುದು ಸರಿಯಲ್ಲ. ಬೇಕಾದರೆ ನೀವೂ ನನ್ನ ವಿರುದ್ಧವೂ ಫಾರ್ಮ್ 7 ಮೂಲಕ ಆಕ್ಷೇಪಗಳನ್ನು ಸಲ್ಲಿಸಿ ಎಂದು ಮೈಸೂರು?ಕೊಡಗು ಕ್ಷೇತ್ರದ ಬಿಜೆಪಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾಂಗ್ರೆಸ್ ಗೆ ನೇರವಾಗಿಯೇ ಸವಾಲು ಹಾಕಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯದುವೀರ್ ಒಡೆಯರ್, ಆಕ್ಷೇಪಣೆ ಸಲ್ಲಿಸಿದ ನಂತರ ಅದು ಸುಳ್ಳೋ, ನಿಜವೋ ಎಂದು ಪರಿಶೀಲಿಸಿ ತೀರ್ಮಾನಿಸುವುದು ಚುನಾವಣಾ ಆಯೋಗ. ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಗೊಂದಲ ಸೃಷ್ಟಿಸುತ್ತಿದೆ ಎಂದು ಆರೋಪಿಸಿದರು.

ಕೇವಲ ಆಕ್ಷೇಪಗಳನ್ನು ವ್ಯಕ್ತಪಡಿಸುವುದಕ್ಕಾಗಿ ಇರುವುದು ಫಾರ್ಮ್ 7. ರಾಜ್ಯ ಸರ್ಕಾರದ ಅಧಿಕಾರಿಗಳು ಫಾರ್ಮ್ 7 ಕೊಡುತ್ತಾರೆ ಮತ್ತು ನಿರ್ಣಯಿಸುತ್ತಾರೆ. ಆದರೆ, ಈ ವಿಚಾರದಲ್ಲಿ ಕಾಂಗ್ರೆಸ್ ಗೊಂದಲ ಮತ್ತು ಆತಂಕ ಸೃಷ್ಟಿಸುವ ಕೆಲಸ ಮಾಡುತ್ತಿದೆ ಎಂದು ದೂರಿದರು.

ಬಿಜೆಪಿ ಕಚೇರಿಯಿಂದ ನಾವು



ನೇಮಕ ಮಾಡಿರುವವರು ಫಾರ್ಮ್ 7 ಅರ್ಜಿಗಳನ್ನು ಸಲ್ಲಿಸಿದ್ದಾರೆ ಎಂದು ಆರೋಪ ಮಾಡಲಾಗುತ್ತಿದೆ. ಬಿಜೆಪಿ ಕಚೇರಿಯಿಂದಲೇ ಫಾರ್ಮ್‌ಗಳನ್ನ ದುರ್ಬಳಕೆ ಮಾಡಲಾಗಿದೆ ಎಂಬ ಆರೋಪಕ್ಕೆ ಯಾವುದೇ ಆಧಾರವಿಲ್ಲ. ಕಾನೂನುಬದ್ಧವಾಗಿ ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆಯಲ್ಲಿ ನಾವು ಕೂಡ ನಮ್ಮ ಕೆಲಸ ಮುಂದುವರಿಸುತ್ತಿದ್ದೇವೆ ಎಂದು ಅವರು ಹೇಳಿದರು.

ಕೇಂದ್ರದಲ್ಲಿ ಬಿಜೆಪಿಯ ಸತತ ಗೆಲುವನ್ನು ಸಹಿಸಲಾಗದ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳಿಗೆ ಸರಿಯಾದ ರೀತಿಯಲ್ಲಿ ಚುನಾವಣೆ ಎದುರಿಸಲು ಸಾಮರ್ಥ್ಯ ಇಲ್ಲ. ಬೀದಿಯಲ್ಲಿ ನಿಂತು ಅರ್ಧ ಸತ್ಯ ಹೇಳುವುದು ಮತ್ತು ಅಪಪ್ರಚಾರ ಮಾಡುವುದೇ ಈಗ ಅವರ ಅಸ್ತ್ರಗಳಾಗಿವೆ ಎಂದು ಟೀಕಿಸಿದರು.

# ಸೂಕ್ಷ್ಮ ನೀರಾವರಿ ಘಟಕಗಳಿಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ರಾಮನಗರ, ಅ.09 (ಕರ್ನಾಟಕ ವಾರ್ತೆ): ಕೃಷಿ ಬೆಳೆಗಳಲ್ಲಿ ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ 2026-27ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ-ಪ್ರತಿ ನೀರಿಗೆ ಅಧಿಕ ಬೆಳೆ (ಪಿಎಂ-ಆರ್‌ಕೆವಿವೈ-ಪಿಡಿಎಂಸಿ) ಸೂಕ್ಷ್ಮ ನೀರಾವರಿ ಯೋಜನೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುತ್ತದೆ. ಈ ಯೋಜನೆಯಡಿ ನೀರಾವರಿ ಮೂಲವನ್ನು ಹೊಂದಿರುವ ರೈತರ ಸೂಕ್ಷ್ಮ ನೀರಾವರಿ ಘಟಕಗಳಿಗೆ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

ತುಂತುರು ನೀರಾವರಿಗೆ ಸಂಬಂಧಿಸಿದಂತೆ ಎಲ್ಲಾ ವರ್ಗದ ರೈತರಿಗೆ 2.0 ಹೆಕ್ಟೇರ್ ಪ್ರದೇಶದವರೆಗೆ ಶೇ. 90ರಷ್ಟು ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ. ಹನಿ ನೀರಾವರಿಗೆ ಸಂಬಂಧಿಸಿದಂತೆ ಸಣ್ಣ/ ಅತಿಸಣ್ಣ/ಪ.ಜಾ/ಪ.ಪಂ ವರ್ಗದ ರೈತರಿಗೆ ಮಾತ್ರ ಶೇ. 90ರಷ್ಟು ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.

ಸೂಕ್ಷ್ಮ ನೀರಾವರಿ ಘಟಕಗಳನ್ನು ಸಹಾಯಧನದಡಿ ಪಡೆಯಲು ಎಲ್ಲಾ ವರ್ಗದ ರೈತರಿಗೆ ಪ್ರತಿ 7 ವರ್ಷಕ್ಕೊಮ್ಮೆ ಅವಕಾಶವಿರುತ್ತದೆ.

ಸೂಕ್ಷ್ಮ ನೀರಾವರಿ ಸವಲತ್ತನ್ನು ಪಡೆಯಲು ನಿಗಧಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲುಗಳೊಂದಿಗೆ ವೈಯಕ್ತಿಕ ವಿವರ, ಮೊಬೈಲ್ ಸಂಖ್ಯೆ, ಪಹಣಿ, ಆಧಾರ್, ಭಾವಚಿತ್ರ, ಬ್ಯಾಂಕ್ ಖಾತೆ ವಿವರಗಳು, ಜಾತಿ ಪ್ರಮಾಣ ಪತ್ರ (ಪ.ಜಾತಿ/ಪಂಗಡದ ರೈತರಿಗೆ ಮಾತ್ರ) ಹಾಗೂ ನೀರಿನ ಮೂಲದ ಪತ್ರಗಳನ್ನು ಲಗತ್ತಿಸಿ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಅನುದಾನದ ಲಭ್ಯತೆಯಿದ್ದು ಅರ್ಜಿ ಸಲ್ಲಿಸಿ, ರೈತರ ವಂತಿಕೆಯನ್ನು ಪಾವತಿಸಿದ ರೈತರಿಗೆ ಕೂಡಲೇ ತುಂತುರು ನೀರಾವರಿ ಘಟಕಗಳ ವಿತರಣೆ ಮಾಡಲಾಗುವುದು.

# ಧರ್ಮಸ್ಥಳ ಸಂಸ್ಥೆ ವ್ಯಸನಮುಕ್ತಗೊಳಿಸಿ ಮನೆಯ ದೀಪ ಬೆಳಗುತ್ತಿದೆ : ಡಾ. ಹನುಮಂತನಾಥಸ್ವಾಮೀಜಿ



ತುಮಕೂರು:ದುಶ್ಚಟಮುಕ್ತ ಸಮಾಜ ನಿರ್ಮಾಣವಾಗಬೇಕು ಎಂದು ಮಹಾತ್ಮಗಾಂಧಿ ಕನಸು ಕಂಡಿದ್ದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಸಂಸ್ಥೆ ಮದ್ಯವರ್ಜನ ಶಿಬಿರಗಳ ಮೂಲಕ ಮದ್ಯವ್ಯಸನಿಗಳಿಗೆ ಹೊಸ ಬದುಕು ನೀಡುತ್ತಾ ಅವರ ಮನೆಯ, ಮನೆದ ದೀಪ ಬೆಳಗುತ್ತಿದೆ.ಆದರೆ ಸರ್ಕಾರ ಹಾಗೂ ರಾಜಕಾರಣಿಗಳು ಮದ್ಯವನ್ನು ಪ್ರೋತ್ಸಾಹಿಸುತ್ತಾ ಮನೆಗಳ ದೀಪ ಆರಿಸುತ್ತಿದ್ದಾರೆ ಎಂದು ಎಲೆರಾಂಪುರ ಕುಂಚಿಟಿಗರ ಮಹಾಸಂಸ್ಥಾನದ ಡಾ॥ಹನುಮಂತನಾಥಸ್ವಾಮೀಜಿ ವಿಷಾದಿಸಿದರು.

ಗಾಂಧಿಜಯಂತಿ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಹಾಗೂ ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಆಶ್ರಯದಲ್ಲಿ ನಗರದ ಹನುಮಂತಪುರದ ಕೊಲ್ಲಾಪುರದಮ್ಮ ಸಭಾಭವನದಲ್ಲಿ ಶುಕ್ರವಾರ ನಡೆದದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕಾಗಿ ಗಾಂಧಿ ಸ್ಮೃತಿ ಮತ್ತು ಬೃಹತ್ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಕುಡುಕರನ್ನು ಅವಹೇಳನ ಮಾಡುವ ಈ ಸಮಾಜದಲ್ಲಿ ಇಡೀ ಜಗತ್ತಿನಲ್ಲಿ ಕುಡುಕರಿಗೆ ವೇದಿಕೆ ನೀಡಿ, ಕುಡಿತ ಬಿಟ್ಟವರನ್ನು ಗೌರವಿಸುವ ಏಕೈಕ ಸಂಸ್ಥೆ ಎಂದರೆ ಅದು ಪೂಜ್ಯ ಡಾ॥ಡಿ.ವೀರೇಂದ್ರಹೆಗ್ಗಡೆರವರು ಕಟ್ಟಿದ ಧರ್ಮಸ್ಥಳ ಸಂಸ್ಥೆ. ಒಂದು ಸರ್ಕಾರ ಮಾಡಬೇಕಾದ ಸಮಾಜ ಸುಧಾರಣಾ ಕೆಲಸವನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂದು ಅಭಿನಂದಿಸಿದರು.

ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಚಟುವಟಿಕೆ ನಡೆಸಲು ಅವಕಾಶ ನೀಡಿ ಅವರನು ?ನಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವುದರಿಂದ ಹಿಡಿದು, ದೇವಾಲಯಗಳ ಜೀರ್ಣೋದ್ಧಾರ, ಅಶಕ್ತರಿಗೆ ಮನೆ ಕಟ್ಟಿಸಿಕೊಡುವುದು, ವಿದ್ಯಾರ್ಥಿವೇತನ, ವೃದ್ಧಾಪ್ಯ ವೇತನ, ಶಾಲೆಗಳಿಗೆ ಡೆಸ್ಕ್ ಕೊಡುವುದು ಮುಂತಾದ ಹಲವಾರು ಕಾರ್ಯಕ್ರಮಗಳ ಮೂಲಕ ಧರ್ಮಸ್ಥಳ ಸಂಸ್ಥೆ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾ ಸ್ವಾಸ್ಥ್ಯ ಸಮಾಜ ನಿರ್ಮಾಣದ ಗಾಂಧೀಜಿ ಕನಸನ್ನು ನನಸು ಮಾಡುವಕಡೆ ಮುನ್ನಡೆದಿದೆ ಎಂದು ಹೇಳಿದರು.

ಈಗ ದೇವಸ್ಥಾನಗಳು, ಮಠಮಾನ್ಯಗಳು ಜಾತಿಆಧಾರಿತವಾಗಿವೆ. ಆದರೆ ಜಾತಿ, ಧರ್ಮ, ಲಿಂಗ, ಪಕ್ಷ ಬೇಧವಿಲ್ಲದೆಎಲ್ಲರಿಗೂ ಸಹಾಯ ಮಾಡುವ ಮೂಲಕ ಮಾದರಿ ಸಮಾಜ ನಿರ್ಮಾಣಕಟ್ಟುವ ಕೆಲಸವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ವೀರೇಂದ್ರ ಹೆಗ್ಗಡೆಯವರು ಸ್ಥಾಪನೆ ಮಾಡಿದ ಈ ಸಂಸ್ಥೆ ಮಾಡುತ್ತಿದೆ. ಕುಡಿತಚಟ ಅನೇಕ ಕುಟುಂಬಗಳ ನೆಮ್ಮದಿ ಹಾಳು ಮಾಡಿದೆ.ಸಂಸಾರಗಳನ್ನು ಬೀದಿಗೆತಂದಿದೆ. ಅಂತಹ ವ್ಯಸನಿಗಳನ್ನು ಮದ್ಯವರ್ಜನ ಶಿಬಿರಗಳ ಮೂಲಕ ವ್ಯಸನಮುಕ್ತರನ್ನಾಗಿ ಮಾಡಿಅವರನ್ನು ಹೊಸ ಬದುಕಿನತ್ತ ಕರೆದೊಯ್ಯುತ್ತಿರುವ ಧರ್ಮಸ್ಥಳ ಸಂಸ್ಥೆಯ ಸೇವೆ ಶ್ಲಾಘನೀಯ ಎಂದು ಡಾ॥ಹನುಮಂತನಾಥ ಸ್ವಾಮೀಜಿ ಹೇಳಿದರು.

ಜನಜಾಗೃತಿ ವೇದಿಕೆ ಟ್ರಸ್ಟ್ನ ಜಿಲ್ಲಾ ಅಧ್ಯಕ್ಷ ಆರ್.ಕಾಮರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಬಾಪೂಜಿಯವರ ರಾಮರಾಜ್ಯ ಸ್ಥಾಪನೆ ಕನಸಿಗೆ ಧರ್ಮಸ್ಥಳ ಸಂಸ್ಥೆಯ ಕಾರ್ಯಕ್ರಮಗಳು ಪ್ರೇರಣೆಯಾಗಿವೆ. 30 ವರ್ಷಗಳ ಹಿಂದೆಡಾ. ವೀರೇಂದ್ರ ಹೆಗ್ಗಡೆಯವರು ಸ್ಥಾಪನೆ ಮಾಡಿದ ಜನಜಾಗೃತಿ ವೇದಿಕೆ ಮೂಲಕ ಮದ್ಯವ್ಯಸನಿಗಳನ್ನು ಮನ:ಪರಿವರ್ತನೆ ಮೂಲಕ ವ್ಯಸನಮುಕ್ತರನ್ನಾಗಿ ಮಾಡುತ್ತಿದೆ ಎಂದರು.

ಲೇಖಕಿ ಮಲ್ಲಿಕಾ ಬಸವರಾಜುಅವರು ಮಹಾತ್ಮಗಾಂಧೀಜಿ ಬಗ್ಗೆ ಉಪನ್ಯಾಸ ನೀಡಿದರು .ಸ್ಫೂರ್ತಿಡೆವಲಪರ್ಸ್ನ ವ್ಯವಸ್ಥಾಪಕ ನಿರ್ದೇಶಕಎಸ್.ಪಿ.ಚಿದಾನಂದ್ ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಾಣ ಮಾಡಬೇಕಾದ ಸರ್ಕಾರ ಮದ್ಯ ಮಾರಾಟವನ್ನು ಪ್ರೋತ್ಸಾಹಿಸುತ್ತಿರುವುದು ಎಷ್ಟು ಸರಿ? ಮದ್ಯವ್ಯಸನದಿಂದ ಕುಟುಂಬ ವ್ಯವಸ್ಥೆ ಹಾಳಾಗುತ್ತಿದೆ.ಕುಡಿತದಿಂದ ಆರೋಗ್ಯವೂ ಹಾಳಾಗುತ್ತದೆ.ಇಂತಹ ಪರಿಸ್ಥಿತಿಯಲ್ಲಿ ಧರ್ಮಸ್ಥಳ ಸಂಸ್ಥೆ ಮದ್ಯವರ್ಜನ ಶಿಬಿರ ಮೂಲಕ ವ್ಯವಸನಿಗಳಿಗೆ ನವಜೀವನ ನೀಡುತ್ತಿದೆಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಸತೀಶ್ ಸುವರ್ಣ, ಡಾ.ಆರ್.ಎಲ್. ರಮೇಶ್‌ಬಾಬು ಜನಜಾಗೃತಿ ವೇದಿಕೆ ಉಪಾಧ್ಯಕ್ಷ ಅ.ನ.ಲಿಂಗಪ್ಪ,ತಾಲ್ಲೋಕು ಯೋಜನಾಧಿಕಾರಿಗಳಾದ ಪಿ.ಬಿ.ಸಂದೇಶ್, ಪ್ರಭಾಕರ್ ರಾಮ್ ನಾಯಕ್, ಸಂಸ್ಥೆಯ ಸಿಬ್ಬಂದಿ ಭಾಗವಹಿಸಿದ್ದರು.ರಾಜೇಶ್ ನಿರೂಪಿಸಿದರು, ಸತೀಶ್ ಸುವರ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು, ಪಿ.ಬಿ.ಸಂದೇಶ್ ಸ್ವಾಗತಿಸಿ,ಪ್ರಭಾಕರ್ ರಾಮ್ ನಾಯಕ್ ವಂದಿಸಿದರು.

# ಚಿನ್ನಾಭರಣ ವಿಚಾರವಾಗಿ ತಾಯಿಯ ಹತ್ಯೆ: ಪುತ್ರನ ಬಂಧನ

ಬೆಂಗಳೂರು: ಚಿನ್ನದ ಒಡವೆ ವಿಚಾರವಾಗಿ ತಾಯಿಯೊಂದಿಗೇ ಜಗಳ ತೆಗೆದು, ಆಕೆಯನ್ನು ಭೀಕರವಾಗಿ ಹೊಡೆದು ಪುತ್ರನೊಬ್ಬ ಹತ್ಯೆ ಮಾಡಿರುವ ಘಟನೆ ಕೊಂದಿರುವ ಘಟನೆ ಬೆಂಗಳೂರಿನ ಕಾಡುಗೋಡಿಯಲ್ಲಿ ನಡೆದಿದೆ.

ಮೃತರನ್ನು ಬೇವಿನ ಮರ ಕಾಲೋನಿಯ ನಿವಾಸಿ ಭಾಗ್ಯಮ್ಮ (60) ಎಂದು ಗುರುತಿಸಲಾಗಿದೆ. ಅವರ ಮೂರನೇ ಮಗ ಬಾಲಾಜಿ (35) ಕೊಲೆ ಆರೋಪದ ಮೇಲೆ ಬಂಧಿತನಾಗಿದ್ದಾನೆ.

ಕೊಲೆಯ ನಂತರ ಆರೋಪಿಯು ಇದನ್ನು 'ಆಕಸ್ಮಿಕವಾಗಿ ಕೆಳಗೆ ಬಿದ್ದು ಸಂಭವಿಸಿದ ಸಾವು' ಎಂದು ಬಿಂಬಿಸಲು ಹರಸಾಹಸ ಪಟ್ಟಿದ್ದರೂ, ವೈದ್ಯಕೀಯ ವರದಿಯಿಂದಾಗಿ ಆತನ ಪಾಪದ ಕೃತ್ಯ ಬಯಲಾಗಿದೆ.

ಬಂಧನದ ಬಳಿಕ ಆರೋಪಿ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ, ತಂದೆಯ ಮರಣದ ನಂತರ ತಾಯಿ ಮದ್ಯಪಾನ ಮಾಡಲು ಆರಂಭಿಸಿದ್ದರು. ಆಗಾಗ ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು. ಅಲ್ಲದೆ, ಮನೆಯ ಸಮೀಪ ವ್ಯಕ್ತಿಯೊಬ್ಬರು ಆಗಾಗ ಕುಳಿತುಕೊಳ್ಳುತ್ತಿದ್ದ ವಿಚಾರವಾಗಿ ನೆರೆಹೊರೆಯವರು ತಾಯಿಯ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದಾರೆ ಎಂಬ ಕೋಪವೂ ತನಗಿತ್ತು ಎಂದು ಆತ ಹೇಳಿದ್ದಾನೆ ಎನ್ನಲಾಗಿದೆ.

ತಾಯಿಯ 32 ಗ್ರಾಂ ಚಿನ್ನಾಭರಣಗಳನ್ನು



ಆರೋಪಿ ಅಡವಿಟ್ಟಿದ್ದು, ಅವುಗಳನ್ನು ವಾಪಸ್ ನೀಡುವಂತೆ ಭಾಗ್ಯಮ್ಮ ಒತ್ತಾಯಿಸುತ್ತಿದ್ದಾರೆ. ಈ ವಿಚಾರವಾಗಿ ಸೆಪ್ಟೆಂಬರ್ 24 ರಾತ್ರಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಕೋಪಗೊಂಡ ಆರೋಪಿ ತಾಯಿಯ ಮೇಲೆ ಪದೇಪದೆ ಹಲ್ಲೆ ನಡೆಸಿದ್ದಾನೆ. ಗಂಭೀರವಾಗಿ ಗಾಯಗೊಂಡ ಭಾಗ್ಯಮ್ಮ ಸ್ಥಳದಲ್ಲೇ ಕುಸಿದು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಮುಂದೇನು ಮಾಡಬೇಕೆಂದು ತೋಚದೆ, ಮರುದಿನ ಬೆಳಗ್ಗೆ ಸಂಬಂಧಿಕರಿಗೆ ಕರೆ ಮಾಡಿದ ಆರೋಪಿ ಬಾಲಾಜಿ, ತಾಯಿ ಹಾಸಿಗೆಯಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾನೆ. ಬಳಿಕ ಕುಟುಂಬಸ್ಥರು ಮತ್ತು ಸಂಬಂಧಿಕರು ಮನೆಗೆ ಆಗಮಿಸಿ ಅಂತ್ಯಕ್ರಿಯೆಗೆ ಸಿದ್ಧತೆ ಆರಂಭಿಸಿದ್ದರು.

ಈ ನಡುವೆ, ಭಾಗ್ಯಮ್ಮ ಮೃತಪಟ್ಟಿರುವ ಬಗ್ಗೆ ತುರ್ತು ಸಹಾಯವಾಣಿ 112ರ ಮೂಲಕ ಕಾಡುಗೋಡಿ ಪೊಲೀಸರಿಗೆ ಮಾಹಿತಿ ಸಿಕ್ಕಿದೆ. ಅಂತ್ಯಕ್ರಿಯೆಯ ಸಿದ್ಧತೆಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದ್ದಾಗ ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲನೆ ನಡೆಸಿದಾಗ ಸಾವಿನ ಸನ್ನಿವೇಶಗಳ ಬಗ್ಗೆ ಅನುಮಾನ ವ್ಯಕ್ತವಾಗಿದೆ.

ಮರಣೋತ್ತರ ಪರೀಕ್ಷೆ ನಡೆಸಬೇಕೆಂದು ಪೊಲೀಸರು ಒತ್ತಾಯಿಸಿದಾಗ ಕುಟುಂಬಸ್ಥರು ಹಾಗೂ ಸ್ಥಳೀಯರು ಆರಂಭದಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಳಿಕ ಪೊಲೀಸರು ಮೃತದೇಹವನ್ನು ವಶಕ್ಕೆ ಪಡೆದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ. ಪರೀಕ್ಷೆಯ ವರದಿಯಲ್ಲಿ ಭಾಗ್ಯಮ್ಮ ಅವರ ದೇಹದ ಮೇಲೆ 12 ಗಂಭೀರ ಗಾಯಗಳಾಗಿರುವುದು ಪತ್ತೆಯಾಗಿದೆ.

ಇದರಿಂದ ಅನುಮಾನಗೊಂಡ ಪೊಲೀಸರು ಸ್ಥಳೀಯರು ಮತ್ತು ನೆರೆಹೊರೆಯವರನ್ನು ಪ್ರತ್ಯೇಕವಾಗಿ ವಿಚಾರಣೆ ನಡೆಸಿದ್ದಾರೆ. ಈ ವೇಳೆ ಸೆಪ್ಟೆಂಬರ್ 24ರಂದು ತಾಯಿ ಮತ್ತು ಮಗನ ನಡುವೆ ಜಗಳ ನಡೆದಿದ್ದ ಸಂಗತಿ ಬೆಳಕಿಗೆ ಬಂದಿದೆ. ಬಳಿಕ ಬಾಲಾಜಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಆತ ತಾಯಿಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

# ರಾಜ್ಯಾದ್ಯಂತ 45 ಐಸ್‌ಕ್ರೀಂ ಘಟಕಗಳ ಮೇಲೆ ದಾಳಿ: ಅವಧಿ ಮೀರಿದ ಕಚ್ಚಾ ವಸ್ತುಗಳು ಪತ್ತೆ



ಕರ್ನಾಟಕ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ (ಈಖಆಂ) ಆಹಾರ ಸುರಕ್ಷತಾ ವಿಭಾಗವು ನಿನ್ನೆ ಗುರುವಾರ ಸಾಯಂಕಾಲ ರಾಜ್ಯದಾದ್ಯಂತ 45 ಐಸ್‌ಕ್ರೀಂ ತಯಾರಿಕಾ ಘಟಕಗಳಲ್ಲಿ ವಿಶೇಷ ತಪಾಸಣೆ ನಡೆಸಿದ್ದು, ಗುಣಮಟ್ಟ ಪರೀಕ್ಷೆ ಮತ್ತು ನಿಯಮಗಳ ಪಾಲನೆ ಪರಿಶೀಲನೆಗಾಗಿ 70 ಮಾದರಿಗಳನ್ನು ಸಂಗ್ರಹಿಸಿದೆ.

ಸಂಗ್ರಹಿಸಿದ ಮಾದರಿಗಳಲ್ಲಿ ಐಸ್‌ಕ್ರೀಂ, ಹಾಲು, ಹಾಲಿನ ಪುಡಿ, ಸುವಾಸನೆ ನೀಡುವ ಪದಾರ್ಥಗಳು, ಸಕ್ಕರೆ, ಆಹಾರ ಸೇರ್ಪಡೆಗಳು ಹಾಗೂ ಐಸ್‌ಕ್ರೀಂ ತಯಾರಿಕೆಯಲ್ಲಿ ಬಳಸುವ ಇತರ ಕಚ್ಚಾ ವಸ್ತುಗಳು ಸೇರಿವೆ ಎಂದು ಎಫ್‌ಎಸ್‌ಡಿಎ ತಿಳಿಸಿದೆ. ಈ ಮಾದರಿಗಳನ್ನು ವಿಶ್ಲೇಷಣೆಗಾಗಿ ಸರ್ಕಾರಿ ಆಹಾರ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ.

ತಪಾಸಣೆ ವೇಳೆ ಬೆಂಗಳೂರು, ರಾಯಚೂರು ಮತ್ತು ಮೈಸೂರಿನಲ್ಲಿರುವ ಕೆಲವು ತಯಾರಿಕಾ ಘಟಕಗಳಲ್ಲಿ ನಿಯಮ ಉಲ್ಲಂಘನೆಗಳು ಪತ್ತೆಯಾಗಿವೆ.

1. ಸವರಾ ಐಸ್‌ಕ್ರೀಂ ಕೆಫೆ (ಜಯನಗರ 3ನೇ ಬ್ಲಾಕ್, ಬೆಂಗಳೂರು)

ಅವಧಿ ಮೀರಿದ ಕಚ್ಚಾ ವಸ್ತುಗಳು ಮತ್ತು ಪದಾರ್ಥಗಳನ್ನು ಜಾರಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಇವುಗಳಲ್ಲಿ ನಂದಿನಿ ಸಮೃದ್ಧಿ ಹಾಲು, ಬ್ರಿಟಾನಿಯಾ ಮೇರಿ ಗೋಲ್ಡ್ ಬಿಸ್ಕತ್ತುಗಳು, ಒಣಗಿಸಿದ ತೆಂಗಿನ ಪುಡಿ ಹಾಗೂ ಕ್ಷಾರಯುಕ್ತ ಟೀ/ಕಾಫಿ ಮಿಶ್ರಣಗಳು ಸೇರಿವೆ. ಈ ಘಟಕದ ವಿರುದ್ಧ ಕಾನೂನು ಕ್ರಮ ಆರಂಭಿಸಲಾಗಿದೆ.

2. ಎಂ.ಎನ್. ಎಂಟರ್‌ಪ್ರೈಸಸ್ (ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು)

ಅವಧಿ ಮೀರಿದ ಮಿಲ್ಕಿ ಮಿಸ್ಟ್ ಖೋವಾ, ನೆಸ್ಲೆ ಮಿಲ್ಕ್‌ಮೇಡ್ ಮತ್ತು ಪ್ಲೇನ್ ಕ್ಯಾರಮೆಲ್ ದಾಸ್ತಾನನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಅಲ್ಲದೆ, ಕಡ್ಡಾಯ ಲೇಬಲ್ ನಿಯಮಗಳನ್ನು ಪಾಲಿಸದಿರುವುದನ್ನೂ ಪತ್ತೆಹಚ್ಚಲಾಗಿದೆ.

3. ಜೆಮಿನಿ ಐಸ್‌ಕ್ರೀಂ ತಯಾರಿಕಾ ಘಟಕ (ರಾಯಚೂರು)

ಉತ್ಪಾದನಾ ಘಟಕದ ಒಳಗೆ ತೀವ್ರ ಸ್ವಚ್ಛತೆಯ ಕೊರತೆ ಕಂಡುಬಂದಿದೆ. ಈ ಸಂಬಂಧ ಘಟಕದ ಆಡಳಿತ ಮಂಡಳಿಗೆ ಅಧಿಕೃತ ನೋಟಿಸ್ ನೀಡಲಾಗಿದ್ದು, ದಂಡನಾತ್ಮಕ ಕ್ರಮ ಬಾಕಿ ಇದೆ.

4. ಜಾನ್ ಕ್ಯಾಂಡಿ ಐಸ್‌ಕ್ರೀಂ ತಯಾರಿಕಾ ಘಟಕ (ಮೈಸೂರು)

ಲೇಬಲ್‌ಗಳಲ್ಲಿ ಗಂಭೀರ ಲೋಪಗಳು ಕಂಡುಬಂದ ಹಿನ್ನೆಲೆಯಲ್ಲಿ ?20,000 ಮೌಲ್ಯದ ಸಿದ್ಧ ಐಸ್‌ಕ್ರೀಂ ಉತ್ಪನ್ನಗಳನ್ನು ಇಲಾಖೆ ವಶಪಡಿಸಿಕೊಂಡಿದೆ. ಮುಂದಿನ ಕಾನೂನು ಕ್ರಮ ಪ್ರಕ್ರಿಯೆಯಲ್ಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಅವರ ಸೂಚನೆಯ ಮೇರೆಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ?2006 ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಆಹಾರ ಉದ್ಯಮಗಳ ಪರವಾನಗಿ ಮತ್ತು ನೋಂದಣಿ) ನಿಯಮಗಳು2011ರ ಅಡಿಯಲ್ಲಿ ಈ ತಪಾಸಣಾ ಕಾರ್ಯಾಚರಣೆ ನಡೆಸಲಾಗಿದೆ. ಸಾರ್ವಜನಿಕ ಆರೋಗ್ಯದ ರಕ್ಷಣೆ ಮತ್ತು ಆಹಾರ ಸುರಕ್ಷತೆಗೆ ಸಂಬಂಧಿಸಿದ ಕಾನೂನುಬದ್ಧ ಮಾನದಂಡಗಳ ಕಟ್ಟುನಿಟ್ಟಿನ ಪಾಲನೆಯನ್ನು ಖಚಿತಪಡಿಸಿಕೊಳ್ಳಲು ಕರ್ನಾಟಕದಾದ್ಯಂತ ಇಂತಹ ದಿಢೀರ್ ತಪಾಸಣೆಗಳನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

# 11ರಂದು ಲೋಕಸಿರಿ ತಿಂಗಳ ಅತಿಥಿ-121 ಕಾರ್ಯಕ್ರಮ

ರಾಮನಗರ (ಕರ್ನಾಟಕ ವಾರ್ತೆ): ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ "ಲೋಕಸಿರಿ ತಿಂಗಳ ಅತಿಥಿ-121, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ" ಕಾರ್ಯಕ್ರಮವನ್ನು ಅ.11ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ರಾಮನಗರದ ಜಾನಪದ ಲೋಕದಲ್ಲಿ ಏರ್ಪಡಿಸಲಾಗಿದೆ.

ಲೋಕಸಿರಿ ತಿಂಗಳ ಅತಿಥಿ ಕಾರ್ಯಕ್ರಮದ ಗೌರವ-ಮಾತುಕತೆ-ಸಂವಾದದಲ್ಲಿ ಅತಿಥಿಯಾಗಿ ಜನಪದ ಹಾಡುಗಾರರಾದ ಡಾ. ರಾಮು ಮೂಲಗಿ ಅವರು ಭಾಗವಹಿಸಲಿದ್ದಾರೆ.

ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಗೌರವ ಉಪಸ್ಥಿತಿ ವಹಿಸುವರು. ಪತ್ರಿಕೆಯ ಸಂಪಾದಕರಾದ ಚಲುವರಾಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ಪೋಷಕರ ಪತ್ತೆಗಾಗಿ ಮನವಿ

ಮೈಸೂರು (ಕರ್ನಾಟಕ ವಾರ್ತೆ):- ಮಂಡ್ಯ ರೈಲ್ವೆ ಸ್ಟೇಷನ್‌ನಲ್ಲಿ ಪತ್ತೆಯಾದ ಸಂಸ್ಕೃತಿ ಎಂಬ ಒಂದು ವಾರದ ಹೆಣ್ಣು ಮಗುವನ್ನು ರೈಲ್ವೆ ಮಕ್ಕಳ ಸಹಾಯವಾಣಿ ಸಿಬ್ಬಂದಿಯವರು ಮಗುವನ್ನು ರಕ್ಷಿಸಿದ್ದು, ಪ್ರಸ್ತುತ ಮಗು ವಿಕಸನ ಜೋಗುಳ ದತ್ತು ಸಂಸ್ಥೆಯಲ್ಲಿ ದಾಖಲಿಸಲಾಗಿದೆ.ಚಹರೆ: ಹೆಸರು ಸಂಸ್ಕೃತಿ, ಒಂದು ವಾರದ ಹೆಣ್ಣು ಮಗು, ದುಂಡು ಮುಖ, ಸಾದಾರಣ ಶರೀರ, ಗಿಡ್ಡ ಮೂಗು, ಬಿಳಿ ಮೈಬಣ್ಣ ತಲೆಯಲ್ಲಿ ಇಂಚು ಉದ್ದದ ಕಪ್ಪು ಕೂದಲು ಇರುತ್ತದೆ.

ಮಗುವಿನ ಪೋಷಕರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ : 0821-2516579

# ಬೆಂಗಳೂರಿನತ್ತ ರೋಗಿಗಳ ಓಡಾಟಕ್ಕೆ ಬ್ರೇಕ್!

## ಚಿಕ್ಕಬಳ್ಳಾಪುರದಲ್ಲೇ ಅತ್ಯಾಧುನಿಕ ಸರ್ಕಾರಿ ಎಮ್‌ಆರ್‌ಐ ಸೌಲಭ್ಯ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಎಂಆರ್‌ಐ ಸ್ಕ್ಯಾನಿಂಗ್ ಮಾಡಿಸಬೇಕಾದಲ್ಲಿ ಬೆಂಗಳೂರಿಗೆ ಹೋಗಲೇಬೇಕಿದ್ದ ಪರಿಸ್ಥಿತಿಗೆ ಸದ್ಯದಲ್ಲೇ ದೂರವಾಗಲಿದ್ದು, ದಶಕಗಳಿಂದ ಜಿಲ್ಲೆಯ ಜನರನ್ನು ಕಾಡುತ್ತಿದ್ದ ಎಮ್‌ಆರ್‌ಐ ಸ್ಕ್ಯಾನಿಂಗ್ ಕೊರತೆ ನೀಗಿಸಲು ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆ ಆವರಣದಲ್ಲಿ ಅತ್ಯಾಧುನಿಕ ಎಮ್‌ಆರ್‌ಐ ಸೆಂಟರ್ ನಿರ್ಮಾಣವಾಗುತ್ತಿದೆ.

ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿ ಅತ್ಯಾಧುನಿಕ ಎಮ್‌ಆರ್‌ಐ ಸ್ಕ್ಯಾನಿಂಗ್ ಸೆಂಟರ್ ನಿರ್ಮಾಣವಾಗುತ್ತಿದೆ. ಕೋಟ್ಯಾಂತರ ರೂ ವೆಚ್ಚದಲ್ಲಿ ನಿರ್ಮಾಣವಾಗ್ತಿರುವ ಕೇಂದ್ರದಲ್ಲಿ ಉಪಕರಣಗಳ ಅಳವಡಿಕೆ ಸೇರಿದಂತೆ ಅಂತಿಮ ಹಂತದ ಕಾಮಗಾರಿ ನಡೆಯುತ್ತಿದೆ.

ಮಾಜಿ ಸಚಿವ ಎಂ.ಸಿ.ಸುಧಾಕರ್ ಅವರ ವಿಶೇಷ ಅನುದಾನದ ಮೂಲಕ ಜಿಲ್ಲೆಗೆ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ದೊರೆಯುತ್ತಿದೆ. ಒಂದು ತಿಂಗಳಲ್ಲಿ ಸರ್ಕಾರಿ ಎಂಆರ್‌ಐ ಸೇವೆ ಆರಂಭವಾಗುವ ನಿರೀಕ್ಷೆಯಿದೆ.

ಈ ಹಿನ್ನೆಲೆಯಲ್ಲಿ ಮಾಜಿ ಸಚಿವ ಎಂ.ಸಿ.ಸುಧಾಕರ್ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ನಿರ್ಮಾಣ ಹಂತದಲ್ಲಿರುವ ಎಮ್‌ಆರ್‌ಐ ಸ್ಕ್ಯಾನಿಂಗ್ ಸೆಂಟರ್ ಪರಿಶೀಲನೆ ನಡೆಸಿದರು.

ಎಮ್‌ಆರ್‌ಐ ಉಪಕರಣಗಳ ಅಳವಡಿಕೆ, ಕಟ್ಟಡ ಕಾಮಗಾರಿ ಹಾಗೂ ಸೇವೆ ಆರಂಭಕ್ಕೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಈ ವೇಳೆ ಸರ್ಕಾರಿ ಮೆಡಿಕಲ್ ಕಾಲೇಜಿನ ಮುಖ್ಯಸ್ಥ ಮಂಜುನಾಥ್, ಜಿಲ್ಲಾ ಆರೋಗ್ಯಾಧಿಕಾರಿ ಮಂಜುಳಾ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇಲ್ಲಿಯವರೆಗೆ ಎಮ್‌ಆರ್‌ಐ ಸ್ಕ್ಯಾನಿಂಗ್‌ಗಾಗಿ ಬೆಂಗಳೂರು ಸೇರಿದಂತೆ ಬೇರೆ ಜಿಲ್ಲೆಗಳಿಗೆ ತೆರಳಬೇಕಿದ್ದ ರೋಗಿಗಳಿಗೆ, ಇನ್ನು ಮುಂದೆ ಚಿಕ್ಕಬಳ್ಳಾಪುರದಲ್ಲೇ ಸೌಲಭ್ಯ ಸಿಗಲಿದೆ.

ಸರ್ಕಾರಿ ಆಸ್ಪತ್ರೆಯಲ್ಲೇ ಎಮ್‌ಆರ್‌ಐ ಸೇವೆ ಆರಂಭವಾದರೆ, ದುಬಾರಿ ಖಾಸಗಿ ಆಸ್ಪತ್ರೆಗಳ ಅವಲಂಬನೆಯಿಂದ ಬಡ ರೋಗಿಗಳಿಗೆ ದೊಡ್ಡ ಮಟ್ಟದ ಅನುಕೂಲವಾಗಲಿದೆ.

ದಶಕಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೇಳಿಬರುತ್ತಿದ್ದ ಎಮ್‌ಆರ್‌ಐ ಸ್ಕ್ಯಾನಿಂಗ್ ಬೇಡಿಕೆಗೆ ಇದೀಗ ಪರಿಹಾರದ ಕಾಲ ಸನ್ನಿಹಿತವಾಗಿದೆ.

ಬೆಂಗಳೂರು ಸೇರಿದಂತೆ ಬೇರೆ ಜಿಲ್ಲೆಗಳತ್ತ ಮುಖ ಮಾಡುತ್ತಿದ್ದ ರೋಗಿಗಳು, ಇನ್ನೇನು ತಮ್ಮ ಜಿಲ್ಲೆಯಲ್ಲೇ ಅತ್ಯಾಧುನಿಕ ಎಂಆರ್‌ಐ ಸೌಲಭ್ಯ ಪಡೆಯಲಿದ್ದು, ಇದೊಂದು ಜಿಲ್ಲೆಯ ಸರ್ಕಾರಿ ಆರೋಗ್ಯ ವ್ಯವಸ್ಥೆಗೆ ಮತ್ತೊಂದು ಮಹತ್ವದ ಸೇರ್ಪಡೆಯಾಗಲಿದೆ.

# ಸಲ್ಲಾಪುರಮ್ಮ ದೇವಿ ದೇವಸ್ಥಾನದ ಜಾಗದ ವಿವಾದ

## ಎರಡು ಗುಂಪುಗಳ ನಡುವೆ ಗೊಂದಲ-ಗಲಾಟೆ

## ತಡೆಗೆ ಕೊಠಡಿಗೆ ಬೀಗ ಹಾಕಿದ ಅಧಿಕಾರಿಗಳು



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಗುಡಿಬಂಡೆ:** ತಾಲೂಕಿನ ಕೊರೆನಹಳ್ಳಿ ಗ್ರಾಮದಲ್ಲಿ ಸಲ್ಲಾಪುರಮ್ಮ ದೇವಿ ದೇವಸ್ಥಾನದ ಪಕ್ಕದ ಜಾಗದ ವಿಚಾರವಾಗಿ ಗ್ರಾಮಸ್ಥರಲ್ಲಿ ಎರಡು ಗುಂಪುಗಳು ಸೃಷ್ಟಿಯಾಗಿ ಗೊಂದಲ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್, ಪೊಲೀಸ್ ಹಾಗೂ ತಾಲೂಕು ಪಂಚಾಯಿತಿ ಅಧಿಕಾರಿಗಳು ಪರಿಶೀಲನೆ ನಡೆಸಿ, ವಿವಾದಕ್ಕೆ ಕಾರಣವಾಗಿದ್ದ ಕೊಠಡಿಗೆ ಬೀಗ ಹಾಕಿ ತಾಲೂಕು ಪಂಚಾಯಿತಿ ವ್ಯಾಪ್ತಿಗೆ ತೆಗೆದುಕೊಂಡರು.

ಗ್ರಾಮದಲ್ಲಿ ಹಲವು ವರ್ಷಗಳಿಂದ ಸಲ್ಲಾಪುರಮ್ಮ ದೇವಿಯ ಹಬ್ಬ-ಹರಿದಿನಗಳನ್ನು ಗ್ರಾಮಸ್ಥರು ಒಟ್ಟಾಗಿ ಆಚರಿಸಿಕೊಂಡು ಬರುತ್ತಿದ್ದರು. ಇತ್ತೀಚೆಗೆ ಗ್ರಾಮದಲ್ಲಿ ರಾತ್ರಿ ಮನರಂಜನಾ ಕಾರ್ಯಕ್ರಮ ಆಯೋಜಿಸಿದ ಸಂದರ್ಭದಲ್ಲಿ ದೇವಸ್ಥಾನದ ಪಕ್ಕದಲ್ಲಿದ್ದ ಪೆಟ್ಟಿಗೆ ಅಂಗಡಿಯನ್ನು ಕಾರ್ಯಕ್ರಮದ ಅನುಕೂಲಕ್ಕಾಗಿ ಸ್ಥಳಾಂತರಿಸಲಾಗಿತ್ತು.

ಕಾರ್ಯಕ್ರಮ ಮುಗಿದ ಬಳಿಕವೂ ಅಂಗಡಿ ಅದೇ ಸ್ಥಳದಲ್ಲಿ ಉಳಿದಿದ್ದರಿಂದ ಜಾಗದ ವಿಚಾರವಾಗಿ ಗ್ರಾಮಸ್ಥರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು ಬಳಿಕ ಜಾಗದ ವಿಚಾರವಾಗಿ ಗ್ರಾಮದಲ್ಲಿ ಎರಡು ಗುಂಪುಗಳ ಭಿನ್ನಾಭಿಪ್ರಾಯ ಹಾಗೂ ರಾಜಕೀಯ ಗೊಂದಲಕ್ಕೂ ಕಾರಣವಾಯಿತು.

ದೇವಸ್ಥಾನದ ಪಕ್ಕದಲ್ಲಿರುವ ಖಾಲಿ ಜಾಗವನ್ನು ದೇವಿಯ ಪೂಜೆ ಹಾಗೂ ದೇವಸ್ಥಾನದ ಬಳಕೆಗೆ ಬಿಡಬೇಕು ಎಂದು ಒಂದು ಗುಂಪಿನವರು ಒತ್ತಾಯಿಸಿದರು. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಚಂದಾ ಸಂಗ್ರಹಿಸಿ ಅಡುಗೆ ಪಾತ್ರೆ ಹಾಗೂ ಪೂಜಾ ಸಾಮಗ್ರಿಗಳನ್ನು ಇಡಲು ಕಬ್ಬಿಣದ ಶೀಟ್‌ಗಳಿಂದ ಸಣ್ಣ ಕೊಠಡಿಯೊಂದನ್ನು ನಿರ್ಮಿಸಿದ್ದರು.

ಆದರೆ, ಕೊಠಡಿ ನಿರ್ಮಿಸಿರುವುದರಿಂದ ಚರಂಡಿ ನೀರು ಸರಿಯಾಗಿ ಹರಿಯದೆ ಅಲ್ಲಿಯೇ ನಿಲ್ಲುತ್ತದೆ. ಇದರಿಂದ ಸ್ವಚ್ಛತೆಗೆ ತೊಂದರೆಯಾಗುತ್ತದೆ ಎಂದು ಮತ್ತೊಂದು ಗುಂಪಿನವರು ಆಕ್ಷೇಪ ವ್ಯಕ್ತಪಡಿಸಿ, ಕೊಠಡಿಯನ್ನು ತೆರವುಗೊಳಿಸುವಂತೆ ಒತ್ತಾಯಿಸಿದರು. ಈ ವಿಚಾರವಾಗಿ ಎರಡೂ ಗುಂಪುಗಳ ನಡುವೆ ಗೊಂದಲ ಹೆಚ್ಚಾಗಿ ಪೊಲೀಸ್ ಠಾಣೆ ಹಾಗೂ ತಾಲೂಕು ಪಂಚಾಯಿತಿಗೆ ದೂರು ನೀಡಲಾಗಿತ್ತು.

ದೂರಿನ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಜಾಗ ಪರಿಶೀಲಿಸಿ ಎರಡೂ ಗುಂಪಿನವರೊಂದಿಗೆ ಮಾತನಾಡಿದರು. ಈ ವೇಳೆ ಮಾತಿನ ಚಕಮಕಿ ನಡೆದಿದ್ದು, ಅಧಿಕಾರಿಗಳು ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದರೂ ಒಮ್ಮತ ಮೂಡದ ಕಾರಣ ಗಲಾಟೆ ಹೆಚ್ಚಾಗದಂತೆ ಅಧಿಕಾರಿಗಳು ವಿವಾದಿತ ಕೊಠಡಿಗೆ ಬೀಗ ಹಾಕಿ ತಾಲೂಕು ಪಂಚಾಯಿತಿ ವ್ಯಾಪ್ತಿಗೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನಾಗಮಣಿ ಮಾತನಾಡಿ, ಈ ಜಾಗ ಯಾರೊಬ್ಬರ ಖಾಸಗಿ ಜಾಗವಲ್ಲ, ಇದು ಸರ್ಕಾರಿ ಜಾಗವಾಗಿದೆ. ಪಂಚಾಯಿತಿಯ ಗಮನಕ್ಕೆ ತರದೆ ಇಲ್ಲಿ ಕೊಠಡಿ ನಿರ್ಮಿಸಲಾಗಿದೆ. ಇನ್ನು ಮುಂದೆ ಈ ಕೊಠಡಿಯ ಜವಾಬ್ದಾರಿಯನ್ನು ಯಾರಿಗೂ ನೀಡುವುದಿಲ್ಲ. ಗ್ರಾಮದಲ್ಲಿ ಹಬ್ಬ ಅಥವಾ ಕಾರ್ಯಕ್ರಮಗಳಿದ್ದಾಗ ಪಂಚಾಯಿತಿಯಿಂದಲೇ ಬೀಗ ತೆರೆದು ಒಳಗಿರುವ ಸಾಮಗ್ರಿಗಳನ್ನು ನೀಡಲಾಗುವುದು. ಕಾರ್ಯಕ್ರಮ ಮುಗಿದ ಬಳಿಕ ಪಂಚಾಯಿತಿಯಿಂದಲೇ ಮತ್ತೆ ಬೀಗ ಹಾಕಲಾಗುವುದು. ಈ ವಿಚಾರವಾಗಿ ಮತ್ತೆ ಗೊಂದಲ ಉಂಟಾದರೆ ನಿಯಮದಂತೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಹೇಳಿದರು.

ಗ್ರಾಮಸ್ಥರೆಲ್ಲರೂ ಶಾಂತಿಯುತವಾಗಿ ಇರಬೇಕು. ಯಾವುದೇ ಕಾರಣಕ್ಕೂ ಗಲಾಟೆ ಮಾಡಿಕೊಳ್ಳದೆ, ಗ್ರಾಮದಲ್ಲಿ ಶಾಂತಿ ಕಾಪಾಡಬೇಕು ಎಂದು ಅಧಿಕಾರಿಗಳು ಸೂಚಿಸಿದರು.

# ಜಾತಿ ಸಂಘರ್ಷ ತಂದಿಡುವ ಪ್ರಯತ್ನ ಬಿಡದಿದ್ದರೆ

## ವಸೂಲಿ ದಂಧೆ ಬಿಚ್ಚಿಡುವ ಎಚ್ಚರಿಕೆ ನೀಡಿದ ಒಕ್ಕಲಿಗರ ಒಕ್ಕೂಟ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಬಹುತೇಕ ಎಲ್ಲ ಸಮುದಾಯಗಳೂ ತಿರುಗಿ ಬಿದ್ದಿವೆ. ದಲಿತ ಸಮುದಾಯಗಳು, ಬಲಿಜ ಸಮುದಾಯ ಈವರೆಗೆ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದು, ಇದೀಗ ಒಕ್ಕಲಿಗ ಸಮುದಾಯವೂ ಆಕ್ರೋಶ ವ್ಯಕ್ತಪಡಿಸಿದೆ. ಅನಗತ್ಯವಾಗಿ ಜಾತಿ ಸಂಘರ್ಷ ತಂದಿಡುವ ಪ್ರಯತ್ನ ಬಿಡದಿದ್ದರೆ ಕ್ಷೇತ್ರದಲ್ಲಿ ಶಾಸಕರ ವಸೂಲಿ ದಂಧೆ ಬಿಚ್ಚಿಡುವುದಾಗಿ ಎಚ್ಚರಿಕೆ ನೀಡಿದೆ.



ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ 15 ಸಾವಿರ ಮಾತ್ರ ಒಕ್ಕಲಿಗರ ಮತಗಳಿವೆ ಎಂದು ಹೇಳುವ ಜೊತೆಗೆ ಕೆಂಪೇಗೌಡರ ಜಯಂತಿಗೆ ಬಂದು ಗೊಂದಲ ಸೃಷ್ಟಿ ಮಾಡಿದ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರು ತಮ್ಮ ವರ್ತನೆ ಬದಲಿಸಿಕೊಳ್ಳದಿದ್ದರೆ ಅವರು ಕ್ಷೇತ್ರದಲ್ಲಿ ಮಾಡುತ್ತಿರುವ ವಸೂಲಿ ದಂಧೆ ಬಿಚ್ಚಿಡುವುದಾಗಿ ಒಕ್ಕಲಿಗರ ಒಕ್ಕೂಟ ಎಚ್ಚರಿಸಿದೆ. ಚಿಕ್ಕಬಳ್ಳಾಪುರದ ಪತ್ರಕರ್ತರ ಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಒಕ್ಕಲಿಗರ ಒಕ್ಕೂಟದ ಉಪಾಧ್ಯಕ್ಷ ಪೂಲಕುಂಟಹಳ್ಳಿ ರಘುನಾಥರೆಡ್ಡಿ ಮಾತನಾಡಿ, ರಾಜ್ಯದ 224 ಶಾಸಕರಲ್ಲಿ ಎಲ್ಲ ಬಿಟ್ಟವರು ಶಾಸಕ ಪ್ರದೀಪ್ ಈಶ್ವರ್ ಒಬ್ಬರೇ ಎಂದು ಲೇವಡಿ ಮಾಡಿದರು.

ಪದೇ ಪದೇ ಒಕ್ಕಲಿಗ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡುವ ಜೊತೆಗೆ ಸಮುದಾಯಗಳ ನಡುವೆ ಜಾತಿ ಸಂಘರ್ಷ ತಂದಿಡುವ ಪ್ರಯತ್ನವನ್ನು ಶಾಸಕ ಪ್ರದೀಪ್ ಈಶ್ವರ್ ಮಾಡುತ್ತಿದ್ದಾರೆ. ಇವರ ಈ ವರ್ತನೆ ಸಹಿಸಲು ಸಾಧ್ಯವಿಲ್ಲ. ಹಾಗಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಇವರು ವಿರುದ್ಧ ದೂರು ನೀಡಲು ತೀರ್ಮಾನಿಸಲಾಗಿದೆ.

ಇವರ ವರ್ತನೆ ಹೀಗೇ ಮುಂದುವರಿದರೆ ಕ್ರಷರ್‌ಗಳ ವಸೂಲಿ, ತಾಲೂಕು ಕಚೇರಿಯಲ್ಲಿ ವಸೂಲಿ, ನಗರಸಭೆಯಲ್ಲಿ ವಸೂಲಿ ಯಾರಿಂದ ಎಷ್ಟೆಷ್ಟು ಮಾಡಿಸುತ್ತಿದ್ದಾರೆ ಎಂಬುದನ್ನು ಬಹಿರಂಗ ಪಡಿಸುವುದಾಗಿ ಎಚ್ಚರಿಕೆ ನೀಡಿದರು.

ಅಲ್ಲದೆ ಇವರು ವಸೂಲಿ ಮಾಡುತ್ತಿಲ್ಲ ಎಂದು ದೇವಾಲಯಕ್ಕೆ ಬಂದು ಪ್ರಮಾಣ ಮಾಡಲಿ, ಇವರು ಪ್ರಾಮಾಣಿಕ ಶಾಸಕರು ಎಂದು ಹೇಳಿಕೊಳ್ಳುತ್ತಾರೆ, ಆದರೆ ಎಲ್ಲೆಲ್ಲಿ ಎಷ್ಟೆಷ್ಟು ವಸೂಲಿ ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ. ಇನ್ನು ಮುಂದೆ ಇಂತಹ ಜಾತಿ ಸಂಘರ್ಷ ಸೃಷ್ಟಿಸುವ ಕೆಲಸ ಬಿಟ್ಟು ಅಭಿವೃದ್ಧಿಯತ್ತ ಗಮನ ಹರಿಸಲಿ, ಇವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ದೂರು ನೀಡಲಾಗುವುದು ಎಂದು ಹೇಳಿದರು.

# ದೊಡ್ಡಹಳ್ಳಿಯಲ್ಲಿ ಗ್ಯಾರ್ವಿ ಶರೀಫ್ ವೈಭವದ ಆಚರಣೆ

## ಭಕ್ತಿಸಾಗರದಲ್ಲಿ ಮಿಂದೆದ್ದ ಗ್ರಾಮ-ಪ್ರೀತಿ ಭ್ರಾತೃತ್ವದ ಸಂದೇಶ ಸಾರಿದ ಧಾರ್ಮಿಕ ಸಂಭ್ರಮ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಂತಾಮಣಿ:** ಚಿಂತಾಮಣಿ ತಾಲ್ಲೂಕಿನ ಚಿನ್ನಸಂದ್ರ ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಡ್ಡಹಳ್ಳಿ ಗ್ರಾಮದ ಸಮೀಪವಿರುವ ಅಸ್ತಾನದಲ್ಲಿ ಗ್ಯಾರ್ವಿ ಷರೀಫ್ ಕಾರ್ಯಕ್ರಮವನ್ನು ಗುರುವಾರ ರಾತ್ರಿ ಸಡಗರ, ಸಂಭ್ರಮ ಮತ್ತು ಧಾರ್ಮಿಕ ಶ್ರದ್ಧಾಭಕ್ತಿಯಿಂದ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಸಂದರ್ಭದಲ್ಲಿ ಹಜರತ್ ಶೇಕ್ ಹಕೀಮ್ ಮುನೀರ್ ಮೊಹೊಯೋದ್ದೀನ್ ಷಾ ಖಾದ್ರಿ ಮಾತನಾಡಿ ಗ್ಯಾರ್ವಿ ಷರೀಫ್ ಎಂಬುದು ಇಸ್ಲಾಮಿಕ್ ಸೂಫಿ ಸಂಪ್ರದಾಯದಲ್ಲಿ ಪವಿತ್ರ ಹಾಗೂ ಶ್ರದ್ಧಾಭಕ್ತಿಯಿಂದ ಆಚರಿಸಲಾಗುವ ಪ್ರಮುಖ ಹಬ್ಬವಾಗಿದೆ. ಮಹಾನ್ ಸೂಫಿ ಸಂತ ಹಾಗೂ ಖಾದಿರಿಯಾ ಪಂಥದ ಸಂಸ್ಥಾಪಕರಾದ ಹಜರತ್ ಶೇಖ್ ಅಬ್ದುಲ್ ಖಾದಿರ್ ಜಿಲಾನಿ ಗೌಸ್-ಎ-ಅಜಮ್ ಅವರ ಸ್ಮರಣಾರ್ಥ ಮತ್ತು ಗೌರವಾರ್ಥವಾಗಿ ಆಚರಿಸಲಾಗುತ್ತದೆ ಎಂದರು.

ಮುಂದುವರಿದು ಮಾತನಾಡಿದ ಅವರು, ಗ್ಯಾರ್ವಿ ಷರೀಫ್ ಕೇವಲ ಒಂದು ಧಾರ್ಮಿಕ ಆಚರಣೆಯಷ್ಟೆ ಅಲ್ಲದೆ, ಸಮಾಜದಲ್ಲಿ ಪರಸ್ಪರ ಪ್ರೀತಿ, ಭ್ರಾತೃತ್ವ, ಆಧ್ಯಾತ್ಮಿಕ ಚಿಂತನೆ ಹಾಗೂ ದಾನಧರ್ಮಗಳನ್ನು ಹೆಚ್ಚಿಸುವ ಪವಿತ್ರ ಸಂದರ್ಭವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಡೆದ ವಿಶೇಷ ಧಾರ್ಮಿಕ ಪ್ರಾರ್ಥನೆಗಳು, ಕವ್ವಾಲಿ ಗಾಯನ ಮತ್ತು ಸಾಂಪ್ರದಾಯಿಕ ಆಚರಣೆಗಳಲ್ಲಿ ದಾದಾಪೀರ್, ಜುನೈದ್ ಖಾದ್ರಿ, ಮುಸ್ತಾಕ್ ಷಾ ಖಾದ್ರಿ, ಶಕೀಬ್ ಅಲಿ ಖಾದ್ರಿ, ತಾಜ್, ಸೇರಿದಂತೆ ನೂರಾರು ಭಕ್ತಾದಿಗಳು ಹಾಗೂ ಗ್ರಾಮಸ್ಥರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಆಧುನಿಕ ತಂತ್ರಜ್ಞಾನ ಅಳವಡಿಕೊಳ್ಳಲು ಸಲಹೆ



**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಗೌರಿಬಿದನೂರು:** ವೈಜ್ಞಾನಿಕ ಸಂಶೋಧನೆಗಳು ಹಾಗೂ ಆಧುನಿಕ ತಂತ್ರಜ್ಞಾನಗಳ ಅಳವಡಿಕೆಯಿಂದ ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗಳಾಗಿದ್ದು, ರೈತರು ಕಾಲಕ್ಕೆ ತಕ್ಕಂತೆ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಬೇಕು ಎಂದು ಮಾಜಿ ಸಚಿವ ಎನ್.ಎಚ್.ಶಿವಶಂಕರರೆಡ್ಡಿ ಹೇಳಿದರು.

ಜಿಕೆವಿಕೆ ಕೃಷಿ ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿ, ಹಿಂದಿನ ಕಾಲದಲ್ಲಿ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನೇ ಅವಲಂಬಿಸಿದ್ದ ರೈತರು ಕಡಿಮೆ ಇಳುವರಿ ಪಡೆಯುತ್ತಿದ್ದರು. ವೈಜ್ಞಾನಿಕ ಸಂಶೋಧನೆ, ಸುಧಾರಿತ ಹಾಗೂ ಹೈಬ್ರಿಡ್ ತಳಿಗಳ ಅಭಿವೃದ್ಧಿಯಿಂದಾಗಿ ಇಂದು ರಾಗಿ ಸೇರಿದಂತೆ ಹಲವು ಬೆಳೆಗಳ ಉತ್ಪಾದನೆ ಗಣನೀಯವಾಗಿ ಹೆಚ್ಚಿದೆ ಎಂದರು.

ಹಿಂದೆ ದೇಶದಲ್ಲಿ ಆಹಾರದ ಕೊರತೆ ಎದುರಾಗಿ ವಿದೇಶಗಳಿಂದ ಗೋಧಿ ಸೇರಿದಂತೆ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ಇತ್ತು. ಆದರೆ ವಿಜ್ಞಾನಿಗಳ ಸಂಶೋಧನೆ, ರೈತರ ಪರಿಶ್ರಮ ಹಾಗೂ ಕೃಷಿ ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ಇಂದು ದೇಶದ ಅಗತ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಉತ್ಪಾದಿಸುವ ಸಾಮರ್ಥ್ಯವನ್ನು ಭಾರತ ಹೊಂದಿದೆ ಎಂದು ಹೇಳಿದರು.

ರೈತರಿಗೆ ನ್ಯಾಯಯುತ ಬೆಲೆ ಸಿಗಬೇಕು

ಕೃಷಿ ಉತ್ಪಾದನೆ ಹೆಚ್ಚಾಗಿದ್ದರೂ ರೈತರ ಸಮಸ್ಯೆಗಳು ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಕೃಷಿಗೆ ಬೇಕಾಗುವ ಬಂಡವಾಳ, ರಸಗೊಬ್ಬರ, ಔಷಧ ಹಾಗೂ ಇತರೆ ಖರ್ಚುಗಳು ನಿರಂತರವಾಗಿ ಹೆಚ್ಚುತ್ತಿವೆ. ಬೆಳೆ ಕೈಗೆ ಬಂದ ನಂತರ ಮಾರುಕಟ್ಟೆಯಲ್ಲಿ ಬೆಲೆ ಕುಸಿಯುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ರೈತರು ತಮ್ಮ ಉತ್ಪನ್ನಗಳಿಗೆ ತಾವೇ ಬೆಲೆ ನಿಗದಿಪಡಿಸಲು ಸಾಧ್ಯವಾಗದಿರುವುದು ಕೃಷಿ ಕ್ಷೇತ್ರದ ಪ್ರಮುಖ ಸವಾಲಾಗಿದೆ ಎಂದು ಅವರು ಹೇಳಿದರು.

ಮಾರುಕಟ್ಟೆ ವ್ಯವಸ್ಥೆಯಲ್ಲಿ ಸುಧಾರಣೆ ತಂದು ರೈತರಿಗೆ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಮಾಡಬೇಕಿದೆ. ಕೃಷಿ ಉತ್ಪಾದನೆಯಷ್ಟೇ ಮಾರುಕಟ್ಟೆ ವ್ಯವಸ್ಥೆಯೂ ರೈತಪರವಾಗಬೇಕಾಗಿದೆ ಎಂದು ಶಿವಶಂಕರ ರೆಡ್ಡಿ ಅಭಿಪ್ರಾಯಪಟ್ಟರು.

ಕೃಷಿ ಭೂಮಿ ಸಂರಕ್ಷಣೆ ಅಗತ್ಯ

ನಗರೀಕರಣದ ವೇಗ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೃಷಿ ಭೂಮಿ ವಿವಿಧ ಉದ್ದೇಶಗಳಿಗೆ ಪರಿವರ್ತನೆಯಾಗುತ್ತಿದ್ದು, ಕೃಷಿ ಪ್ರದೇಶ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಕೃಷಿ ಭೂಮಿ ಕಡಿಮೆಯಾದರೆ ಭವಿಷ್ಯದಲ್ಲಿ ಆಹಾರ ಭದ್ರತೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ಕೃಷಿ ಭೂಮಿಯ ಸಂರಕ್ಷಣೆಗೆ ಆದ್ಯತೆ ನೀಡುವ ಅಗತ್ಯವಿದೆ ಎಂದರು.

ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ರೋಗಗಳು, ಕೀಟಬಾಧೆಗಳು ಹಾಗೂ ಹವಾಮಾನ ಸಂಬಂಧಿತ ಸವಾಲುಗಳು ಎದುರಾಗುತ್ತಿದ್ದು, ಇವುಗಳಿಗೆ ವೈಜ್ಞಾನಿಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಂಶೋಧನೆಗಳು ಮತ್ತಷ್ಟು ವೇಗ ಪಡೆಯಬೇಕು. ಕೃಷಿ ವಿದ್ಯಾರ್ಥಿಗಳು ಸುಸ್ಥಿರ ಕೃಷಿ ಪದ್ಧತಿಗಳ ಅಭಿವೃದ್ಧಿ ಹಾಗೂ ರೈತರಿಗೆ ಉಪಯುಕ್ತವಾಗುವ ಸಂಶೋಧನೆಗಳತ್ತ ಹೆಚ್ಚಿನ ಗಮನಹರಿಸಬೇಕೆಂದು ಕರೆ ನೀಡಿದರು.

ಜಿ.ಪಂ ಮಾಜಿ ಅಧ್ಯಕ್ಷ ಎಚ್.ವಿ. ಮಂಜುನಾಥ್, ಸಿ.ಆರ್.ನರಸಿಂಹ ಮೂರ್ತಿ, ಚಿಮುಲ್ ನಿರ್ದೇಶಕ ದಿನೇಶ್ ಇದ್ದರು.

# ವಿದ್ಯಾರ್ಥಿಗಳ ಭವಿಷ್ಯಕ್ಕೆ ಶ್ರೀರಾಮ್ ಫೈನಾನ್ಸ್ ಆಸರೆ- ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಧನ

**ಸ್ಕಂದಗಿರಿ ವಾಣಿ ಸುದ್ದಿಜಾಲ**

**ಚಿಕ್ಕಬಳ್ಳಾಪುರ:** ಸಾರಿಗೆ ಕ್ಷೇತ್ರದಲ್ಲಿ ದುಡಿಯುವ ವಾಹನ ಮಾಲೀಕರು, ಚಾಲಕರು, ಕ್ಲೀನರ್‌ಗಳು, ಹೆಲ್ಪರ್‌ಗಳು ಹಾಗೂ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ ಶ್ರೀರಾಮ್ ಸೇವಾ ಸಂಕಲ್ಪದ ವತಿಯಿಂದ ಶುಕ್ರವಾರ ಚಿಕ್ಕಬಳ್ಳಾಪುರ ರೀಜನ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ವಿತರಣೆ ಆಯೋಜಿಸಲಾಗಿತ್ತು.

ಆದಿಚುಂಚನಗಿರಿ ಶಾಖಾ ಮಠದ ಮಂಗಳನಾಥ ಸ್ವಾಮೀಜಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಬಿ. ರಾಮಲಿಂಗೇಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಂಗಳನಾಥ ಸ್ವಾಮೀಜಿ, ದಾನಗಳಲ್ಲಿ ಅನ್ನದಾನ ಶ್ರೇಷ್ಠವಾದರೆ, ವಿದ್ಯಾದಾನವು ಅತ್ಯಂತ ಮಹತ್ವದ್ದಾಗಿದೆ. ವಿದ್ಯೆಯಿಂದ ಜ್ಞಾನ ದೊರೆಯುತ್ತದೆ. ಜ್ಞಾನವಿದ್ದರೆ ಜೀವನದಲ್ಲಿ ಸಾಧನೆ ಮಾಡಲು ಹಾಗೂ ಉನ್ನತ ಸ್ಥಾನಗಳನ್ನು ತಲುಪಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಶ್ರೀರಾಮ್ ಫೈನಾನ್ಸ್ ಪ್ರೋತ್ಸಾಹಧನ ನೀಡುತ್ತಿರುವುದು ಶ್ಲಾಘನೀಯ. ಇಂತಹ ಕಾರ್ಯಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.



ಹಣಕಾಸಿನ ಸಮಸ್ಯೆ ಎದುರಾದಾಗ ವ್ಯಕ್ತಿಯ ಆತ್ಮವಿಶ್ವಾಸ ಕುಗ್ಗಬಹುದು. ಆ ಸಂದರ್ಭದಲ್ಲಿ ಆರ್ಥಿಕ ನೆರವು ದೊರೆತರೆ ಮತ್ತೆ ಆತ್ಮವಿಶ್ವಾಸದಿಂದ ದುಡಿದು ಜೀವನ ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ವ್ಯಕ್ತಿಗಳ ಆರ್ಥಿಕ ಪ್ರಗತಿಯೇ ಸಮಾಜದ ಅಭಿವೃದ್ಧಿಗೆ ಶಕ್ತಿಯಾಗುತ್ತದೆ. ಈ ನಿಟ್ಟಿನಲ್ಲಿ ವಿವಿಧ ಸಾಲ ಸೌಲಭ್ಯಗಳ ಮೂಲಕ ಜನರ ಆರ್ಥಿಕ ಬೆಳವಣಿಗೆಗೆ ನೆರವಾಗುತ್ತಿರುವ ಸಂಸ್ಥೆಯ ಸೇವಾ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನೂ ಆಯೋಜಿಸಲಾಗಿತ್ತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ನಾಡೋಜ ಪಿಂಡಪಾಪನಹಳ್ಳಿ ಮುನಿವೆಂಕಟಪ್ಪ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮುಕವೀಣೆ ಆಂಜಿನಪ್ಪ, ಡಿಡಿಪಿಐ ವಿ. ರಮೇಶ್, ಪ್ರಾದೇಶಿಕ ಸಾರಿಗೆ ನಿರೀಕ್ಷಕ ನಾಗರಾಜ್, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎನ್. ಸೇರಿದಂತೆ ಹಲವರು ಉಪಸ್ಥಿತರಿದ್ದರು.

Printed by PRABHAKR G., Printed at M/s. SAI PRINTS, # 8, Subramanya Lane, Cottonpet, Bengaluru, Karnataka - 560053
Published by Smt. LAKSHMINARASAMMA, Owned by Smt. LAKSHMINARASAMMA,
Published at : Varalakonda Village, Somenahalli Hobli, Gudibande Taluk, Chikkaballapur Dist-562104, Karnataka. Editor SHIVAKUMAR K. Mobile: 8147582389 / 9743641515